ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

THE BHARAT SCOUTS & GUIDES, KARNATAKA

ಗಂಟುಗಳು

ಪರಿಷ್ಕೃತ ಪಠ್ಯವಸ್ತು



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ನಂ. 39, ರಾಜ್ಯ ಕಾರ್ಯಾಲಯ, ಅರಮನೆ ರಸ್ತೆ,

(ಮಹಾರಾಣಿ ಕಾಲೇಜ್ ಪಕ್ಕದಲ್ಲಿ) ಬೆಂಗಳೂರು - 560 001

ದೂರವಾಣಿ : 080 - 22260017 / 22267470

Email : info@bsgkarnataka.org



Midshipman's Hitch
Open Chain
Open Hand Knot
Double Figure-Eight
Weaver's Knot
Twofold Shortening
Fisherman's Knot
Topsail-Halyard Toggle
Tomfool Knot
Bow Knot
Bow-Line Knot
Overhand Knot
Square Knot
Figure-Eight
Ordinary Knot
Square Knot
Three & Fivefold Knot
Slipped Square
Four-Strand Braid
Tying Bow-Line
Wall Knot
Sheepshank Knot
Double Crown
Simple Hitch
Granny Knot
Half-Hitch
Timber Hitch
Fisherman's Hitch
Gunner's Knot
Twist Braid
Lark's Head
Catspaw
Studding Sail
Gaff-Topsail Halyard Bend
Waterman's Knot
Magnus Hitch
Half-Hitch Knot
Rolling Hitch Knot
Clove Hitch Knot
Timber Hitch Knot

ಪರಿವಿಡಿ		ಪುಟಸಂಖ್ಯೆ
1.	ಮುನ್ನುಡಿ	3
2.	ಮುಖ್ಯ ಆಯುಕ್ತರ ನುಡಿ	4
3.	ಆಶಯ ನುಡಿ	5
4.	ಪರಿಷ್ಕರಣಕಾರರ ನುಡಿ	6
5.	ಮೂರನೇ ಅವೃತಿಯ ಮುನುಡಿ	7
6.	ಪ್ರಸ್ತಾವನೆ	7–8
7	ಅಧ್ಯಾಯ – 1 ತಾಂತ್ರಿಕ ಪದಗಳು	9
8	ಅಧ್ಯಾಯ – 2 ಹುರಿ ಸುತ್ತುವುದು	10–11
9	ಅಧ್ಯಾಯ – 3 ಗಂಟುಗಳು	12–21
10	ಅಧ್ಯಾಯ – 4 ಮಲಕುಗಳು	22–31
11	ಅಧ್ಯಾಯ – 5 ಕಟ್ಟುಗಳು	32–37
12	ಅಧ್ಯಾಯ – 6 ಹೆಣಿಗೆಗಳು	38–42
13	ಅನುಬಂಧ – 1	43
14	ಅನುಬಂಧ – 2	44
15	ಅನುಬಂಧ – 3	45
16	ಅನುಬಂಧ – 4	46
17	ಅನುಬಂಧ – 5	47
18	ಅನುಬಂಧ – 6	48

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
THE BHARAT SCOUTS & GUIDES, KARNATAKA

ಗಂಟುಗಳು

ಪರಿಷ್ಕೃತ ಪಠ್ಯವಸ್ತು

ಪ್ರಕಾಶಕರು : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, (ಕರ್ನಾಟಕ)
#39, ರಾಜ್ಯ ಕಾರ್ಯಾಲಯ, ಅರಮನೆ ರಸ್ತೆ,
ಮಹಾರಾಣಿ ಕಾಲೇಜ್ ಪಕ್ಕ, ಬೆಂಗಳೂರು – 560 001

ಮೂಲ ಸಂಗ್ರಹಣೆ ನಿರೂಪಣೆ : ರಾ. ಚಂದ್ರಶೇಖರನ್, ಲೀಡರ್ ಟ್ರೈನರ್
ಪರಿಷ್ಕರಣೆ : ಎನ್. ಶ್ರೀನಿವಾಸನ್, ಲೀಡರ್ ಟ್ರೈನರ್

ದೂರವಾಣಿ :
ರಾಜ್ಯ ಕೇಂದ್ರ ಕಛೇರಿ : 080 – 22260017 / 22267470

ಪ್ರತಿಗಳು : 2000
ಮೊದಲ ಮುದ್ರಣ 2013
ಎರಡನೇ ಮುದ್ರಣ 2018
ಮೂರನೇ ಮುದ್ರಣ 2024

© ಹಕ್ಕುಗಳು : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಬೆಲೆ : ರೂ. 30/-

ಮುದ್ರಕರು :
ತೇಜ್ ಪ್ರಿಂಟ್ ಹೌಸ್,
ನಂ. 86 ಋಷಿಮನೆ 7ನೇ'ಇ' ಮುಖ್ಯರಸ್ತೆ, 2ನೇ ಹಂತ, ಬಸವೇಶ್ವರನಗರ
ಬೆಂಗಳೂರು – 560 079. ಮೊ: 98450 42209 / 98455 13183

ಮುನ್ನುಡಿ

ಸ್ಕೌಟಿಂಗ್ "ನೆಮ್ಮದಿಯ ಜೀವನಕ್ಕಾಗಿ ಶಿಕ್ಷಣ" ಎಂಬುದೊಂದು ಮಾತು. ಆ ನೆಮ್ಮದಿ ಇರಬೇಕಾದರೆ ಅನೇಕ ಕೌಶಲಗಳು ನಮ್ಮ ಹಸ್ತಗತವಾಗಬೇಕು. ಈ ದಿಕ್ಕಿನಲ್ಲಿ ಸ್ಕೌಟಾದವನು ಕಲಿಯಬೇಕಾದ, ಅವನಿಗೆ ಕಲಿಸಲು ಸ್ಕೌಟರುಗಳು ತಿಳಿದಿರಬೇಕಾದ ಅನೇಕ ಕೌಶಲಗಳು, ಪ್ರಗತಿಪರ ಪದಕಗಳಲ್ಲಿಯೂ, ಪ್ರವೀಣತಾ ಪದಕಗಳಲ್ಲಿಯೂ ಅಡಕವಾಗಿವೆ. ಕೌಶಲಗಳನ್ನು ಹಸ್ತಗತ ಮಾಡಿಕೊಳ್ಳುವುದರ ಮೂಲಕ ಸ್ಕೌಟುಗಳು ಸ್ವಾವಲಂಬಿಗಳಾಗಿಯೂ, ಮಿತವ್ಯಯಿಗಳಾಗಿಯೂ, ಸಮಾಜಕ್ಕೆ ಉಪಯುಕ್ತ ವ್ಯಕ್ತಿಗಳಾಗಿಯೂ, ಅನುಕರಣೀಯ ವ್ಯಕ್ತಿಗಳಾಗಿಯೂ ರೂಪುಗೊಳ್ಳುತ್ತಾರೆ. ಹಾಗಾಗಿ ಸ್ಕೌಟುಗಳು ಕಲಿಯುವ ನೂರಾರು ಕೌಶಲಗಳಲ್ಲಿ "ಗಂಟುಗಳು" ಒಂದಾಗಿ, ಜೀವನದ ನಂಟಾಗಿ, ದಿನನಿತ್ಯದ ಬಳಕೆಗೂ, ಅವಶ್ಯಕತೆ ಬಿದ್ದಾಗ ಪ್ರಾಣ ಸಂರಕ್ಷಣೆಗೂ ಉಪಯೋಗಕ್ಕೆ ಬರುತ್ತದೆ.

ಲೇಖಕರು ತಿಳಿಸಿರುವಂತೆ ಗಂಟುಗಳ ಉಪಯೋಗವನ್ನು ಪಟ್ಟಿಮಾಡಿದರೆ ಅದೊಂದು ನಿಘಂಟು ಆಗುವುದರಲ್ಲಿ ಎರಡನೆಯ ಮಾತಿಲ್ಲ.

ಶ್ರೀ ಚಂದ್ರಶೇಖರನ್ ಅವರು ಸಾಹಿತಿಗಳಾಗಿದ್ದು ಕ್ಷೇತ್ರಗಳಲ್ಲಿ ಅನುಭವಿಗಳಾಗಿ ಸಾಕಷ್ಟು ಅಧ್ಯಯನ ಮಾಡಿದವರೂ ಆಗಿ ಸೂಕ್ತ ರೀತಿಯ ಆಧಾರಗಳಿಂದ ಆಯ್ದು ಸುಲಭದಲ್ಲಿ ಮನಗಾಣುವಂತೆ ಮೊದಲ ಮುದ್ರಣದಲ್ಲಿ ವಿವರಿಸಿದ್ದಾರೆ.

ಎರಡನೆಯ ಮುದ್ರಣಕ್ಕಾಗಿ ಪರಿಷ್ಕರಣಾ ಕಾರ್ಯವನ್ನು ಕೈಗೊಂಡ ಶ್ರೀ ಎನ್. ಶ್ರೀನಿವಾಸನ್ ರವರು ಸ್ಕೌಟಿಂಗ್ ಕ್ಷೇತ್ರದಲ್ಲಿ ಅದರಲ್ಲೂ ಸ್ಕೌಟ್ ವಿಭಾಗದ ಪರಿಣಿತ ತರಬೇತುದಾರರಾಗಿದ್ದು, ಸೋಪಾನ ಪದಕಗಳ ಆಧಾರದ ಮೇಲಿನ ನಿರೂಪಣೆಯನ್ನು ಬದಲಿಸಿ, ಕೌಶಲಗಳ ಆಧಾರದ ಮೇಲೆ ನಿರೂಪಿಸಿರುತ್ತಾರೆ. ಇದು ಹೆಚ್ಚು ವಾಸ್ತವಿಕವೆನಿಸುತ್ತದೆ, ಗಂಟುಗಳನ್ನು ಹಾಕುವುದು ಮತ್ತು ಉಪಯೋಗ ಮಾತ್ರ ತಿಳಿಯುವುದರ ಜೊತೆಗೆ ಅದರ ಉದ್ದೇಶವನ್ನು ತಿಳಿಯುವುದರಿಂದ ಕಲಿಕೆಯು ಮತ್ತಷ್ಟು ಪರಿಣಾಮಕಾರಿಯಾಗುತ್ತದೆ. ಅಷ್ಟೇ ಅಲ್ಲದೆ ನೈಜ ವರ್ಣಚಿತ್ರಗಳಿಂದ ವಿವರಣೆಯನ್ನು ನೀಡಿರುವುದು ಪುಸ್ತಕವನ್ನು ಆಕರ್ಷಕವನ್ನಾಗಿ ಮಾಡಿದೆ.

ಶ್ರೀ ಶ್ರೀನಿವಾಸನ್‌ಅವರ ಈ ಪರಿಶ್ರಮವು ಶ್ಲಾಘನೀಯನಾದುದು, ಅವರನ್ನು ಅಭಿನಂದಿಸುತ್ತೇನೆ,

ಕನ್ನಡದಲ್ಲಿ ಸ್ಕೌಟ್ ಸಾಹಿತ್ಯವನ್ನು ಸುಲಭದಲ್ಲಿ ಒದಗಿಸಬೇಕು. ರಾಜ್ಯದ ಮೂಲೆ ಮೂಲೆಗಳಲ್ಲಿ ವಿಶೇಷತಃ ಗ್ರಾಮೀಣ ಪ್ರದೇಶಗಳಲ್ಲಿ ಸ್ಕೌಟಿಂಗಿನ ಕಂಪು ಹರಡಬೇಕೆಂಬುದು ರಾಜ್ಯಸಂಸ್ಥೆಯ ಆಶಯ. ಈ ನಿಟ್ಟಿನಲ್ಲಿ ಅಂದಿನ ರಾಜ್ಯ ಮುಖ್ಯ ಆಯುಕ್ತರಾಗಿದ್ದ ಶ್ರೀ ಕೋಂಡಜ್ಜಿ ಬ. ಷಣ್ಮುಖಪ್ಪ ಅವರ ಕನಸು ನನಸಾಗಿಸುವ ಪ್ರಯತ್ನ ಸಫಲವಾಗಿ ಗಂಟಾಗಿದ್ದ ಸಮಸ್ಯೆಯೊಂದು ಈ " ಗಂಟುಗಳು" ಕಿರು ಪುಸ್ತಿಕೆಯ ರೂಪದಲ್ಲಿ ಪರಿಹಾರ ಕಂಡಿದೆ. ಈಗಿನ ರಾಜ್ಯಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಅದೇ ಧೋರಣೆಯನ್ನು ಮುಂದುವರೆಸಿ ಕನ್ನಡ ಸ್ಕೌಟ್ ಸಾಹಿತ್ಯಕ್ಕೆ ಉತ್ತೇಜನ ನೀಡುತ್ತಿರುವುದು ಹರ್ಷದಾಯಕ ಸಂಗತಿ ಆಗಿದೆ.

ಸ್ಕೌಟುಗಳು, ಸ್ಕೌಟರುಗಳೂ ಹಾಗೂ ಗೈಡ್ ಶಾಖೆಯ ಭಗಿನಿಯರೂ, ಈ ಪುಸ್ತಕದ ಉಪಯೋಗ ಪಡೆದು ಕೌಶಲ ನಿಪುಣರಾಗುವರೆಂದು ಆಶಿಸುತ್ತೇನೆ.

ಗೊ.ರು.ಚನ್ನಬಸಪ್ಪ

ಅಧ್ಯಕ್ಷರು, ಪ್ರಕಟಣೆಗಳ ಸಮಿತಿ

ಮುಖ್ಯ ಆಯುಕ್ತರ ನುಡಿ

ಸ್ಕೌಟಿಂಗ್ ವಿಶ್ವವ್ಯಾಪಿ ಸಂಸ್ಥೆ, ಸ್ಕೌಟಿಂಗ್ ಎಂಬುದು ಸುಖಮಯವಾದ ಬಾಳಿಗಾಗಿ ನೀಡುವ ಶಿಕ್ಷಣ ಎಂದು ಹೇಳುವುದುಂಟು. ಅಂತಹ ಬಾಳಿಗೆ ಅನೇಕ ಕೌಶಲಗಳನ್ನು ಮಕ್ಕಳು-ಮರಿಗಳು, ಸ್ಕೌಟುಗಳು,ರೋವರ್‌ಗಳು ಕಲಿಯುತ್ತಾರೆ, ಈ ರೀತಿಯಲ್ಲಿ ಕಲಿಯುವ ಬಾಳ ಕೌಶಲಗಳಲ್ಲಿ ಗಂಟುಗಳೂ ಒಂದು ಕೌಶಲ. ಶ್ರೀ ಗೊ.ರು.ಚ. ಅವರು ಹೇಳಿರುವಂತೆ ಅವು ಜೀವನನದ ನಂಟಾಗಿ, ದಿನನಿತ್ಯ ಬಳಕೆಗೂ, ಅವಶ್ಯಕತೆ ಬಿದ್ದಾಗ ಪ್ರಾಣರಕ್ಷಣೆಗೂ ಉಪಯೋಗಕ್ಕೆ ಬರುತ್ತದೆ.

ಪ್ರಾಣರಕ್ಷಣೆಗೆ ಉಪಯೋಗಕ್ಕೆ ಬರಬಹುದಾಗಿದ್ದ ಗಂಟುಗಳ ಅಜ್ಞಾನದ ಬಗ್ಗೆ ಸಂಸ್ಥಾಪಕ ಬೇಡನ್ ಪೊವೆಲ್ ಅವರು "ನಯಾಗರ ಘಟನೆಯ" ನ್ನು ಬಾಲಕರಿಗಾಗಿ ಸ್ಕೌಟಿಂಗ್ ಪುಸ್ತಕದಲ್ಲಿ ಹೇಳಿರುತ್ತಾರೆ. ಮೂಲ ಲೇಖಕರು ತಮ್ಮ ಪದ್ಯದಲ್ಲಿ ಗಂಟುಗಳ ಉಪಯೊಗಗಳು ಒಂದು "ನಿಘಂಟು" ಆಗುವುದಾಗಿ ತಿಳಿಸಿರುತ್ತಾರೆ. ಇವೆಲ್ಲವೂ ವಾಸ್ತವ ಸಂಗತಿಗಳು.

"ಗಂಟುಗಳು" ಪುಸ್ತಕವನ್ನು ಪರಿಷ್ಕರಿಸಿರುವ ಎನ್. ಶ್ರೀನಿವಾಸನ್ ಅವರು ಸ್ಕೌಟ್ ವಿಭಾಗದ ಹಿರಿಯ ತರಬೇತುದಾರರುಗಳಲ್ಲೊಬ್ಬರು. ಕ್ಷೇತ್ರಾನುಭವಿಗಳು. ನಿರೂಪಣೆಯ ಕ್ರಮವನ್ನು ಬದಲಾಯಿಸುವುದರಿಂದ ಹಿಡಿದು, ಪ್ರತಿ ಗಂಟಿನ ಉದ್ದೇಶಗಳನ್ನು ತಿಳಿಸಿ, ವರ್ಣರಂಜಿತ ಚಿತ್ರಗಳನ್ನೊಳಪಡಿಸಿ, ಪುಸ್ತಕವನ್ನು ವಾಸ್ತವಿಕವಾಗಿ ಹೆಚ್ಚು ಪರಿಣಾಮಕಾರಿಯಾಗಿ ಆಕರ್ಷಕವಾಗಿ, ಬಿಂಬಿಸಿರುತ್ತಾರೆ.

ಈ ಉತ್ತಮಕಾರ್ಯಕ್ಕಾಗಿ ಎನ್. ಶ್ರೀನಿವಾಸನ್ ಅವರನ್ನು ಅಭಿನಂದಿಸುತ್ತೇನೆ. ಈ ಉತ್ತಮ ಕೌಶಲವನ್ನು ಮೊದಲ ಬಾರಿಗೆ, ಈಗ್ಗೆ 4 ವರ್ಷಗಳ ಹಿಂದೆ ವಿವರಿಸಿ ಪುಸ್ತಕ ರೂಪದಲ್ಲಿ ಒದಗಿಸಿದ ಮೂಲ ಲೇಖಕರಾದ ಶ್ರೀ ಚಂದ್ರಶೇಖರನ್ ಅವರ ಪ್ರಯತ್ನವು ಸ್ತುತ್ಯಾರ್ಹವಾದುದು.

ಪ್ರಕಟಣಾ ಸಮಿತಿ ಅಧ್ಯಕ್ಷರಾದ ಶ್ರೀ ಗೊ.ರು.ಚ ಅವರು ಹೇಳಿರುವಂತೆ " ಸ್ಕೌಟಿಂಗ್ ಗ್ರಾಮೀಣ ಪ್ರದೇಶಗಳಲ್ಲಿ ಹರಡಲು ಗಂಟಾಗಿದ್ದ ಸಮಸ್ಯೆಯೊಂದು ಈ "ಗಂಟುಗಳು" ಪುಸ್ತಕದ ರೂಪದಲ್ಲಿ ಪರಿಹಾರ ಕಂಡಿದೆ. ಬಹಳ ಸಂತೋಷ,

ಈ ಪುಸ್ತಕದ ಉಪಯೋಗದಿಂದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಉತ್ತಮವಾಗಿ ಕ್ರಿಯಾಶೀಲರಾಗಿ ಸೇವೆ ಸಲ್ಲಿಸುವರೆಂದು ಆಶಿಸುತ್ತೇನೆ.

ಅಂದವಾಗಿ ಮುದ್ರಿಸಿರುವ ತೇಜ್ ಪ್ರಿಂಟ್ ಹೌಸ್‌ನ ಗಂಗಾಧರ್ ಅವರನ್ನು ಅಭಿನಂದಿಸುತ್ತೇನೆ

ಪಿ.ಜಿ.ಆರ್. ಸಿಂಧ್ಯ

ರಾಜ್ಯ ಮುಖ್ಯ ಆಯುಕ್ತರು

ಆಶಯ ನುಡಿ

ಉತ್ತಮ, ಉತ್ತಮತರ, ಅತ್ಯುತ್ತಮ
ನಿರಂತರ ಸಾಧನೆಯ ಹಂತಗಳು, ಬಾಳಚಂದ್ರಮ :
"ಅತ್ಯುತ್ತಮ" ಸಾಧನೆಯದು ತಾತ್ಕಾಲಿಕ ।
ಸಾಧನೆಗೆ ಅಂತ್ಯವಿಲ್ಲ ತಿಳಿ, ಅದನು ಮೀರಿದ "ಉತ್ತಮ" ಸ್ವಾಭಾವಿಕ

ಸೋದರ ಶ್ರೀನಿವಾಸನ್ ಅವರು ಪರಿಷ್ಕರಣೆ ಮಾಡಿರುವ "ಗಂಟುಗಳು" ಕಿರುಪುಸ್ತಿಕೆಗೆ ಆಶಯನುಡಿಯನ್ನು ಆಶಿಸಿದಾಗ, ಮೇಲಿನ " ಅತ್ಯುತ್ತಮ" ಎನ್ನುವುದು ಕೊನೆಯಲ್ಲ, ಅದನ್ನು ಮೀರಿದ "ಉತ್ತಮ" ಇಲ್ಲದಿಲ್ಲ ಎಂಬ ಸೂಕ್ತಿಯ ಹಿಗ್ಗಿದ ವಿವರ ಕಣ್ಮುಂದೆ ಬಂತು.

ನನ್ನ ವರ್ಷಗಳ ಹಿಂದಿನ ಅಲ್ಪಸೇವೆಯನ್ನು ಶ್ರೀ ಶ್ರೀನಿವಾಸನ್ ಅವರು, ಈ ರೀತಿಯಲ್ಲಿ ಪುನರ್ವಿನ್ಯಾಸಗೊಳಿಸಿ, ಹೆಚ್ಚು ಸ್ಫುಟವಾಗಿ ಪರಿಣಾಮಕಾರಿಯಾಗಿ, ಆಕರ್ಷಕವಾಗಿ ಹೊರತರುತ್ತಿರುವುದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ,

"ಗಂಟುಗಳು" ಪುಸ್ತಕದ ಈ ಹೊಸರೂಪವು ಹೆಚ್ಚು ಮರಿಗಳ/ ಸ್ಕೌಟ್‌ಗಳ/ ರೋವರ್‌ಗಳ ಹಾಗೆಯೇ ಗೈಡ್ ಶಾಖೆಯ – ಸೋದರಿಯರ ಮಕ್ಕಳ ಕೈಸೇರಲಿ. ಈ ತಿಳುವಳಿಕೆಯಿಂದ ಅವರ ಕೌಶಲ ಮತ್ತಷ್ಟು ಉತ್ತಮಗೊಳ್ಳಲಿ. ತುರ್ತು ಸಂದರ್ಭಗಳಲ್ಲಿ ಪ್ರಾಣ ರಕ್ಷಣೆಗೆ, ಉಳಿತಾಯಕ್ಕೆ ಸಹಕಾರಿ ಆಗಲಿ ಎಂದು ಹಾರೈಸುತ್ತೇನೆ.

ಸೋ॥ ಶ್ರೀನಿವಾಸನ್ ಅವರ ಈ ಪರಿಶ್ರಮಕ್ಕಾಗಿ ಅವರನ್ನು ಹೃತ್ಪೂರ್ವಕ ಅಭಿನಂದಿಸುತ್ತೇನೆ.

ಈ ಪರಿಷ್ಕೃತ ಪುಸ್ತಕವನ್ನು ಮುದ್ರಿಸಲು ಕೈಗೆತ್ತಿಕೊಂಡು, ಬೆಳಕು ಕಾಣಿಸಿರುವ, ರಾಜ್ಯಕಾರ್ಯಾಲಯವನ್ನು, ವಿಶೇಷವಾಗಿ ಪ್ರಕಟಣಾಸಮಿತಿಯ ಅಧ್ಯಕ್ಷರ ಹಾರೈಕೆ ಮತ್ತು ರಾಜ್ಯ ಮುಖ್ಯ ಆಯುಕ್ತರ ಪ್ರೋತ್ಸಾಹ ಗಳಿಗಾಗಿ ಋಣಿಯಾಗಿದ್ದೇನೆ,

ರಾ. ಚಂದ್ರಶೇಖರನ್

ಪರಿಷ್ಕರಣಾಕಾರರ ನುಡಿ

ಹಿರಿಯರಾದ, ಸ್ಕೌಟಿಂಗ್ ವಿಷಯದಲ್ಲಿ ವಿಶ್ವ ಕೋಶದಂತಿರುವ ಶ್ರೀ ರಾ.ಚಂದ್ರಶೇಖರನ್‌ರವರು "ಗಂಟುಗಳು" ಎಂಬ ಉಪಯುಕ್ತವಾದ ಕಿರು ಪುಸ್ತಕವನ್ನು ರಚಿಸಿದ್ದರು. ಈ ಪುಸ್ತಕ ಹಾಗೂ ಇನ್ನಿತರ ಕೆಲವು ಕಿರು ಪುಸ್ತಕಗಳನ್ನು ಪುನರ್ ಮುದ್ರಣ ಮಾಡುವ ನಿರ್ಧಾರ ಕೈಗೊಳ್ಳಲಾಯಿತು. ಅದರಂತೆ ಈ ಕಿರುಹೊತ್ತಿಗೆಯನ್ನು ಪುನರ್ ಮುದ್ರಣ ಮಾಡುವ ಮೊದಲು ಬದಲಾದ ಪಠ್ಯವಸ್ತುವಿನಂತೆ ಪರಿಷ್ಕರಿಸಲು ತೊಡಗಿದಾಗ ವಿಷಯಗಳ ಮಂಡನೆಯ ಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಿ ನೀಡಲಾಗಿದೆ. ಪ್ರಥಮ ಸೋಪಾನ್ ಹಂತದಿಂದ ತೃತೀಯ ಸೋಪಾನ್ ಹಂತದವರೆಗಿನ ಪಠ್ಯವಸ್ತುವನ್ನು ಅಳವಡಿಸಲಾಗಿದೆ. ಆದರೆ, ಸೋಪಾನ ಆಧಾರದಲ್ಲಿ ವಿಷಯಗಳ ನಿರೂಪಣೆಯ ಬದಲಾಗಿ ಕೌಶಲ್ಯಗಳ ಆಧಾರದಲ್ಲಿ ವಿಂಗಡಿಸಲಾಗಿದೆ. ಒಂದು ವಿಧವಾದ ಕೌಶಲಗಳೆಲ್ಲವೂ ಒಂದೇ ಅಧ್ಯಾಯದಡಿಯಲ್ಲಿ ಬರುತ್ತವೆ.

ಹುರಿಸುತ್ತುವುದು – ಗಂಟುಗಳು – ಮಲಕುಗಳು – ಕಟ್ಟುಗಳು – ಹೆಣಿಗೆಗಳು

ಗಂಟುಗಳು, ಮಲುಕುಗಳು ಮತ್ತು ಕಟ್ಟುಗಳನ್ನು ಮೂರು ಅಂಶಗಳಡಿಯಲ್ಲಿ ವಿವರಿಸಲಾಗಿದೆ.

1. ಮುಖ್ಯ ಉದ್ದೇಶ, 2. ಎಲ್ಲೆಲ್ಲಿ ಬಳಕೆ, 3. ಚಿತ್ರಗಳೊಡನೆ ವಿಧಾನ,

ಇದಕ್ಕೆ ಕಾರಣವಿಷ್ಟೆ. ಅನೇಕ ಬಾರಿ ಸ್ಕೌಟ್ ಗೈಡ್‌ಗಳು ಉಪಯೋಗಗಳನ್ನು ಹೇಳುತ್ತಾರೆಯೇ ವಿನಃ ಅವುಗಳ ಉದ್ದೇಶವನ್ನು ತಿಳಿದಿರುವುದಿಲ್ಲ. ಉದಾಹರಣೆಗೆ ಸಮಗಂಟನ್ನು ಏಕೆ ಹಾಕುತ್ತಾರೆ ? ಎಂಬ ಪ್ರಶ್ನೆಗೆ ಅವರ ಉತ್ತರ "ಪಾರ್ಸಲ್ ಕಟ್ಟುವುದಕ್ಕೆ" ಎಂದಿರುತ್ತದೆ. ಆದರೆ, ಏಕೆ? ಎಂಬುದಕ್ಕೆ ಉತ್ತರ "ಒಂದೇ ಹಗ್ಗದ 2 ತುದಿಗಳನ್ನು ಸೇರಿಸಲು" ಎಂದಾಗಿರುತ್ತದೆ. ಉದ್ದೇಶ ಒಂದು ಆಗಿರುತ್ತದೆ, ಉಪಯೋಗಗಳು ಹಲವಾರು ಇರುತ್ತವೆ. ಅದನ್ನು ವಿಶದೀಕರಿಸಲು ಪ್ರಯತ್ನಿಸಲಾಗಿದೆ. ಮೇಲ್ಕಂಡ ಬದಲಾವಣೆಗಳನ್ನು ಮಾಡಲು ಅನುಮತಿ ಇತ್ತು, ಆಶಯ ನುಡಿ ಬರೆದು ಆಶೀರ್ವದಿಸಿದ ಶ್ರೀ ರಾ.ಚಂದ್ರಶೇಖರನ್‌ರವರಿಗೆ ನನ್ನ ಕೃತಜ್ಞತೆಗಳು.

ಈ ಪುಸ್ತಕಕ್ಕೆ ಮುನ್ನುಡಿ ಬರೆದು ಪ್ರೋತ್ಸಾಹಿಸಿದ ಪ್ರಕಟಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಗೊ.ರು.ಚನ್ನಬಸಪ್ಪರವರಿಗೆ ನನ್ನ ಕೃತಜ್ಞತೆಗಳು. ಪುಸ್ತಕದ ಪುನರ್ ಮುದ್ರಣಕ್ಕೆ ಅನುಮತಿ ಇತ್ತು ಪ್ರೋತ್ಸಾಹಿಸಿದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯರವರಿಗೆ ನನ್ನ ಕೃತಜ್ಞತೆಗಳು. ಪ್ರಕಟಣಾ ಸಮಿತಿ ಸದಸ್ಯರುಗಳಿಗೆ, ಈ ಪುಸ್ತಕ ಸಿದ್ದ ಪಡಿಸುವ ಕಾರ್ಯದಲ್ಲಿ ನನಗೆ ಸಹಕಾರ ವಿತ್ತ ಶ್ರೀ ತಿಪ್ಪೇಸ್ವಾಮಿ ಮತ್ತು ಶ್ರೀಮತಿ ಪ್ರತಿಭಾ ಇವರಿಗೆ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ತೇಜ್ ಪ್ರಿಂಟಿಂಗ್ ಪ್ರೆಸ್‌ನ ಶ್ರೀ ಗಂಗಾಧರ್ ಅವರಿಗೆ ಕೃತಜ್ಞತೆಗಳು.

ಎಲ್ಲಕ್ಕಿಂತ ಹೆಚ್ಚಾಗಿ ಈ ಪುಸ್ತಕವನ್ನು ಕೈಯಲ್ಲಿ ಹಿಡಿದು, ಇದರ ಉಪಯೋಗ ಪಡೆಯುತ್ತಿರುವ ನಿಮಗೂ ಕೃತಜ್ಞತೆಗಳು. ಪುಸ್ತಕದ ಪರಿಷ್ಕರಣೆಗೆ ತಮ್ಮ ಸಲಹೆ, ಸೂಚನೆಗಳಿಗೆ ಸ್ವಾಗತ.

– ಎನ್ ಶ್ರೀನಿವಾಸನ್

3ನೇ ಮುದ್ರಣಕ್ಕೆ ಮುನ್ನುಡಿ

ಗಂಟುಗಳು ಬಗೆಗಿನ ಕನ್ನಡ ಆವೃತ್ತಿಯ ಪುಸ್ತಕ 3ನೇಯ ಮುದ್ರಣ ಕಾಣುತ್ತಿರುವುದು ಸಂತಸದ ವಿಷಯ. ಸ್ಕೌಟ್‌ಗಳು ಈ ಪುಸ್ತಕವನ್ನು ಇಷ್ಟಪಟ್ಟಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಈ ಹಿಂದೆ ಮುದ್ರಣಗೊಂಡ ಪುಸ್ತಕದಲ್ಲಿ ಹಲವಾರು ಮುದ್ರಣ ದೋಷಗಳು ಇದ್ದವು. ಅವುಗಳನ್ನು ತಿದ್ದುಪಡಿ ಮಾಡಿ, ಮರುಮುದ್ರಿಸಲಾಗಿದೆ.

ಪೀಪಾಯಿ ಮಲಕು ಮತ್ತು ಹಲಗೆ ಮಲಕು ಎಂಬ 2 ಮಲಕುಗಳನ್ನು ಈ ಪುಸ್ತಕದ ಅನುಬಂಧದಲ್ಲಿ ಪರಿಚಯಿಸಲಾಗಿದೆ. ಅಗ್ರಗಾಮಿ ಯೋಜನೆಗಳಲ್ಲಿ ಇವುಗಳನ್ನು ಬಳಸುತ್ತೇವೆ

ನಿಮ್ಮ ಸಲಹೆ, ಸೂಚನೆಗಳಿಗೆ ಸ್ವಾಗತ. ಇದರಿಂದ ಪುಸ್ತಕವು ಮತ್ತಷ್ಟು ಪರಿಪೂರ್ಣವಾಗಲು ಸಹಕಾರಿಯಾಗುತ್ತದೆ.

(ಎನ್. ಶ್ರೀನಿವಾಸನ್)
ಪರಿಷ್ಕರಣಕಾರರು

ಪ್ರಸ್ತಾವನೆ

ಸ್ಕೌಟುಗಳ ಲಾಂಛನ ದಿಕ್ಸೂಚಿಯ ತುದಿಬಿಂದು .ಅದೊಂದು ಅಚ್ಚ ಬಿಳುಪು ವರ್ಣದ ತ್ರಿದಳ ಕಮಲ ಪುಷ್ಪ. ಈ ಲಾಂಛನವು ವಿಶ್ವದ ಅನೇಕ ರಾಜವಂಶಸ್ಥರ (ಉದಾ:ಫ್ರಾನ್ಸ್) ಲಾಂಛನವಾಗಿದ್ದಿತು. ಇದು ನೇರ ನಡೆಯ, ನಾಯಕತ್ವದ, ಸ್ವಚ್ಛತೆಯ, ಪಾವಿತ್ರ್ಯದ, ಮಾರ್ಗದರ್ಶಕ ಬೆಳಕಿನ ಸಂಕೇತವಾಗಿ ಎದ್ದು ನಿಲ್ಲುತ್ತದೆ.

ಮಾರ್ಗದರ್ಶನಕ್ಕೆ ಪೂರಕವಾಗಿ ಮಾರ್ಗಶೋಧನೆ ಮತ್ತು ಮಾರ್ಗಕಲ್ಪನೆಗಳು ಬರುತ್ತವೆ. ಮಾರ್ಗ ಕಲ್ಪನೆಯಲ್ಲಿ ಗಂಟುಗಳ ಪಾತ್ರವು ಮಹತ್ತರವಾದುದು.

ಜೀವನ ಕಲ್ಪನೆಯಲ್ಲಿ ಸಹ ಗಂಟಿನ ಪಾತ್ರವಿದೆ. ಜೀವನವೂಂದು ಕಗ್ಗಂಟು. ಅದನು ಬಿಡಿಸುತ್ತಾ, ಹಗೆತನ, ಜಗಳಗಳಿಲ್ಲದೇ ಬಾಳುವುದು ಜೀವನದ ಗುರಿ. ಹಾಗಾಗಿ ನೆರೆಹೊರೆ, ಬಂಧುಬಳಗ, ಇವರೊಡನೆ ನಂಟು ಬೆಳೆಯಬೇಕು. ಆ ನಂಟಿನ (ವಸ್ತುಸ್ಥಿತಿ + ಭಾವನೆಗಳು) ಗಂಟು ದೃಢವಾಗಬೇಕು. ಇದು ಜೀವನದ ಭಾವನಾತ್ಮಕತೆ ಮಾತ್ರವಲ್ಲದೆ ವಾಸ್ತವಿಕತೆಯೂ ಹೌದು,

ಗಂಟುಗಳನ್ನು ಕಲಿತು, ಉಪಯೋಗ ಮಾಡಿಕೊಳ್ಳುವುದರಿಂದ ಕೈಬೆರಳುಗಳಿಗೂ, ದೇಹದ ಇತರ ಭಾಗಗಳಿಗೂ ವ್ಯಾಯಾಮವು ದೊರಕುತ್ತದೆ. ಜೊತೆಗೆ ಕಾರ್ಯಸಂಬಂಧ ವಿಶ್ಲೇಷಣೆ, ವಿವೇಚನೆಗಳೂ ಕೂಡಿ ಬುದ್ಧಿ ಮತ್ತೆಯ ವಿಕಾಸಕ್ಕೆ ಸಹಾಯಕವಾಗುತ್ತದೆ.

ಗಂಟುಗಳ ಅವಶ್ಯಕತೆಯ ಬಗ್ಗೆ ಒತ್ತಿಹೇಳುವ ಸಲುವಾಗಿ ಬಿ.ಪಿ.ರವರು ತಮ್ಮ ಅನೇಕ ಅನುಭವಗಳಲ್ಲೊಂದನ್ನು "ಬಾಲಕರಿಗಾಗಿ ಸ್ಕೌಟಿಂಗ್" ಪುಸ್ತಕದ ಶಿಬಿರಾಗ್ನಿ ಉದಂತ 8 ರಲ್ಲಿ, "ಗಂಟುಗಳಿಂದ ಪ್ರಾಣ ರಕ್ಷಣೆ" ಶೀರ್ಷಕೆಯಲ್ಲಿ ಹೇಳಿರುವೆ, "ನಯಾಗರಾ ಘಟನೆ" ಎಂದೇ ಪ್ರಸಿದ್ದವಾದ, ಅವರ ಈ ಕಥನವನ್ನು ಎಲ್ಲರೂ ತಿಳಿದಿರಬೇಕು."ಬಹಳ ವರ್ಷಗಳ ಹಿಂದೆ, ನಾನು ಕೆನಡಾ ದೇಶವನ್ನು ಸೇರುವುದಕ್ಕೆ ಸ್ವಲ್ಪ ದಿನಗಳ ಮುಂಚೆ, ನಯಾಗರಾ ಜಲಪಾತದ ಬಳಿ, ಒಂದು ಹೃದಯ ವಿದ್ರಾವಕ

ದುರಂತವು ಸಂಭವಿಸಿತು.ಅದು ಚಳಿಗಾಲದ ಮಧ್ಯಭಾಗ. ಗಂಡ-ಹೆಂಡತಿ ಅವರ 17 ವರ್ಷದ ಮಗ-ಮೂವರೂ ನಯಾಗರ ಜಲಪಾತದ ಕೆಳಗೆ, ನದಿಗೆ ಅಡ್ಡಲಾಗಿ ಏರ್ಪಟ್ಟಿದ್ದ ಹಿಮಸೇತುವೆಯ ಮೇಲೆ ನಡೆದು ಹೋಗುತ್ತಿದ್ದರು. ಇದ್ದಕ್ಕಿದ್ದಂತೆ ಆ ಹಿಮಸೇತುವೆಯು ಕುಸಿಯಿತು. ಗಂಡ ಹೆಂಡತಿ ಒಂದು ಹಿಮಗಡ್ಡೆಯ ಮೇಲೆ, ಬಾಲಕನು ಮತ್ತೊಂದು ಹಿಮಗಡ್ಡೆಯ ಮೇಲೆ ತೇಲಲಾರಂಭಿಸಿದರು. ಅವರ ಸುತ್ತಲೂ ಅದೇ ರೀತಿಯ ಹಿಮಗಡ್ಡೆಗಳು. ಅವರು ತೇಲುತ್ತಿರುವ ಹಿಮಗಡ್ಡೆಗಳೂ ಸೇರಿದಂತೆ ಎಲ್ಲವೂ ಒಂದಕ್ಕೊಂದು ಉಜ್ಜುತ್ತಾ, ಢಿಕ್ಕಿ ಹೊಡೆಯುತ್ತಾ, ತಿರುಗುತ್ತಾ, ನಿಧಾನವಾಗಿ ಚಲಿಸುತ್ತಾ ಇದ್ದರೂ ಕ್ರಮೇಣ ಅವು ವೇಗವನ್ನು ಹೆಚ್ಚಿಸಿಕೊಳ್ಳುತ್ತಾ ನಿಸ್ಸಂದೇಹವಾಗಿ, ನದಿಯ ಇಳಿತದ ಕಡೆ, ಒಂದು ಕಿ.ಮೀ. ದೂರದ ಇಳಿಜಾರು ಪ್ರವಾಹದಡೆಗೆ (Rapids) ಸೆಳೆದೊಯ್ಯುತ್ತಿದ್ದವು.

ಒಂದು ಗಂಟೆಯ ಕಾಲ ಆ ನತದೃಷ್ಟರು, ಹಾಗೆಯೇ ತೇಲುತ್ತಾ, ಅಸಹಾಯಕರಾಗಿ ದೂರದಿಂದ ಅವರನ್ನು ಆತಂಕದಿಂದ ನೋಡುತ್ತಿದ್ದ ಗುಂಪನ್ನು ಹಾಯುತ್ತಾ, ಇಳಿಜಾರು ಪ್ರವಾಹಕ್ಕೆ ಮುಂಚಿತವಾಗಿ ಬರುವ ಎರಡು ಸೇತುವೆಗಳ ಕೆಳಕ್ಕೆ ಸೇರಿದ್ದರು. ನೀರಿನಿಂದ 50 ಮೀ.ಗಳ ಮೇಲೆ ಸೇತುವೆಗಳ ಮೇಲಿದ್ದ ಜನರು ಅವರನ್ನು ರಕ್ಷಿಸುವ ಸಲುವಾಗಿ ಅವರ ಮುಂದೆ ನೇತಾಡುವ ಹಗ್ಗಗಳನ್ನು ಇಳಿಬಿಟ್ಟಿದ್ದರು, ಬಾಲಕನು ಪ್ರಯಾಸ ಪಟ್ಟು ಒಂದು ಹಗ್ಗವನ್ನು ಹಿಡಿದನು, ಜನರು ಅವನನನ್ನು ಮೇಲಕ್ಕೆಳೆಯಲು ಉಪಕ್ರಮಿಸಿದರು, 25-30 ಮೀ ಮೇಲಕ್ಕೆ ಬರುವ ವೇಳೆಗೆ, ಅವನ ಶಕ್ತಿಯು ಕುಂದಿತು. ಹಿಡಿತವು ಸಡಿಲಗೊಂಡಿತು. ಹಗ್ಗದಿಂದ ಕೈಜಾರಿತು ದೇಹವು ಕೆಳಗೆ ಬಿದ್ದು ಪ್ರವಾಹದಲ್ಲಿ ಕಣ್ಮರೆಯಾಯಿತು.

ಅದೇ ರೀತಿ ಇನ್ನೊಂದು ಗಡ್ಡೆಯ ಮೇಲೆ ತೇಲುತ್ತಿದ್ದ ಇಬ್ಬರಲ್ಲಿ ಗಂಡಸು ಹಗ್ಗವನ್ನು ಹಿಡಿದನು, ತನ್ನ ಹೆಂಡತಿಯು ಬದುಕಿಕೊಳ್ಳಲೆಂಬ ಉದ್ದೇಶದಿಂದ ಅವಳಿಗೆ ಹಗ್ಗವನ್ನು ಬಳಸಿ ಕಟ್ಟಲು ಪ್ರಾರಂಭಿಸಿದನು. ಆದರೆ ಇಳಿಜಾರು ಪ್ರವಾಹದ ಸೆಳತವೆನ್ನಿ. ಚಳಿಗೆ ಸೆಟೆದುಕೊಂಡಿದ್ದ ಅವನ ಕೈಬೆರಳುಗಳ ಅಸಹಕಾರವೆನ್ನಿ, ಹಗ್ಗವು ಜಾರಿತು. ಹಿಡಿದ ಕೆಲಸ ಪೂರ್ತಿ ಆಗಲಿಲ್ಲ. ಚಲನೆಯಲ್ಲಿದ್ದ ಹಿಮಗಡ್ಡೆಯ ಮೇಲೆ ಅವರು ಆಯ ತಪ್ಪಿದರು. ಕೆಳಗೆ ಬಿದ್ದ ಅವರನ್ನು ರಭಸದಿಂದ ಮುನ್ನುಗ್ಗುತ್ತಿದ್ದ ಪ್ರವಾಹವು ಎಳೆದುಕೊಂಡಿತು. ಅವರ ಬವಣೆಯು ಹಿಂಗಿತು,

ಕೆನಡಾದ ಸ್ಕೌಟ್ ಮಾಸ್ಟರೊಬ್ಬರು "ಈ ದುರಂತದ ಸ್ವಲ್ಪ ಕಾಲದ ಬಳಿಕ ನಾನು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದೆ. ಸಹ ಪ್ರಯಾಣಿಕರು ಇದರ ಬಗ್ಗೆ ಮಾತನಾಡುತ್ತಿದ್ದರು (ನಾನು ಸ್ಕೌಟ್‌ಗೆ ಸಂಬಂಧಪಟ್ಟವನೆಂದು ತಿಳಿದಿರಲಿಲ್ಲ) ಅವರಲ್ಲೊಬ್ಬರು ಸ್ಕೌಟುಗಳೇ ಅಲ್ಲಿದ್ದಿದ್ದರೆ ಅವರೇನಾದರೂ ಮಾಡಿ ಈ ಬಡಪಾಯಿಗಳ ರಕ್ಷಣೆ ಮಾಡುತ್ತಿದ್ದರು" ಎಂದು ಅಭಿಪ್ರಾಯಪಟ್ಟರು

ಆ ಮೂವರ ಮರಣಕ್ಕೆ ಕಾರಣ :

1) ಹಗ್ಗವನ್ನು ಇಳಿಬಿಟ್ಟ ಜನರಿಗೆ ಕುಣಿಕೆ ಗಂಟು ಹಾಕಿ ಕುಣಿಕೆಯನ್ನು ಇಳಿಬಿಡಲಾಗಲೀ
2) ಜೋಡಣೆಗೆ ಸರಿಯಾದ ಗಂಟು ಹಾಕುವುದಾಗಲೀ
3) ಸಾವನ್ನಪ್ಪಿದ ಆ ಮೂವರಿಗೆ ಚಕ್ಕನೆ ಗಂಟು ಹಾಕುವುದಿರಲಿ ಕುಣಿಕೆ ಹಾಕಿಕೊಂಡು ತಮ್ಮ ದೇಹವನ್ನು ತೂರಿಸಿಕೊಳ್ಳಬೇಕೆಂಬುದಾಗಲೀ ತಿಳಿದಿರಲಿಲ್ಲ.

(ಎನ್. ಶ್ರೀನಿವಾಸನ್)
ಪರಿಷ್ಕರಣಕಾರರು

"ತಾಂತ್ರಿಕ ಪದಗಳು"(Technical Words)

ಈ ಕೆಳಕಾಣಿಸಿರುವ ಚಿತ್ರಗಳನ್ನು ಸರಿಯಾಗಿ ಗಮನಿಸಿ, ಸರಳವಾದ ತಾಂತ್ರಿಕ ಪದಗಳು ನೆನಪಿನಲ್ಲಿರಲಿ.

ಪ್ರದರ್ಶನದ ವೇಳೆ ಹಗ್ಗದ ಬಹುತೇಕ ಭಾಗವು (ಎಡಗೈನಲ್ಲಿ) ಅಲುಗದಂತಿರುವುದರಿಂದ "ಸ್ಥಿರಭಾಗ" ಎನಿಸುತ್ತದೆ. ಇದಕ್ಕೆ ಪ್ರತಿಯಾಗಿ (ಬಲಗೈಯಲ್ಲಿ) ಗಂಟನ್ನು ಹಾಕಿ ಮುಗಿಸುವ ಹಗ್ಗದ ತುದಿಯು "ಧಾವಕ ತುದಿ" ಎನಿಸುತ್ತದೆ.

ಹಗ್ಗದಲ್ಲಿ ಗಂಟು ಹಾಕುವ ಮುನ್ನ ಮಲಕು ಮಾಡಿಕೊಳ್ಳುವುದನ್ನು "ಕುಣಿ" ಎನ್ನುತ್ತಾರೆ.



"ಹುರಿ ಸುತ್ತುವುದು"(Whipping)

ಹಗ್ಗದ ತುದಿಯ ಎಳೆಗಳು ಬಿಚ್ಚಿಕೊಳ್ಳದಂತೆ ತಡೆಯಲು ಮಾಡುವ ಉಪಾಯವೇ ಹುರಿ ಸುತ್ತುವುದು. ಹಗ್ಗವು ದಪ್ಪಇದ್ದಾಗ (ಅಗ್ರಗಾಮಿ ಯೋಜನೆಗಳಲ್ಲಿ ಬಳಸುವ ಹಗ್ಗ) ತಂತಿಯನ್ನು ಬಳಸಿ/ ಅಂಟುಪಟ್ಟಿ ಬಳಸಿ / ಹಿಮ್ಮುಖ ಹೆಣಿಗೆ ಹಾಕಿ ಭದ್ರಪಡಿಸಬೇಕಾಗುತ್ತದೆ. ನೈಲಾನ್ ಹಗ್ಗವಾದರೆ ತುದಿಯನ್ನು ಸುಡಬೇಕಾಗುತ್ತದೆ.

(ಸೂಚನೆ : ಹುರಿ ಸುತ್ತಲು ಬಳಸುವ ದಾರ ತೆಳ್ಳಗಿರಬೇಕು.)

1. ಸಾಮಾನ್ಯ ವಿಧಾನ (Common Method)

- ದಾರವನ್ನು ಹಗ್ಗದ ತುದಿಯಲ್ಲಿಟ್ಟು ಒಂದು ಕುಣಿಯನ್ನು ಮಾಡಿರಿ. (Bight) ಹಗ್ಗವನ್ನು ಸ್ವಲ್ಪದೂರ ಮಾತ್ರ ಹುರಿ ಸುತ್ತಬೇಕೆಂಬುದು ನೆನಪಿರಲಿ. (ಹಗ್ಗದ ವ್ಯಾಸದ ಒಂದುವರೆಯಷ್ಟು ದೂರ) ದಾರದ ಸ್ಥಿರ ತುದಿಯನ್ನು ಸ್ವಲ್ಪ ಬಿಟ್ಟು ಧಾವಕದ ತುದಿಯನ್ನು ಹಗ್ಗಕ್ಕೆ ಬಿಗಿಯಾಗಿ ಸುತ್ತುತ್ತಾ ಮೇಲ್ಭಾಗಕ್ಕೆ ಹೋಗಬೇಕು.

- ಧಾವಕದ ತುದಿಯನ್ನು ಕುಣಿಯ ಮೂಲಕ ಹಾಯಿಸಿ ಸ್ಥಿರತುದಿಯನ್ನು ನಿಧಾನವಾಗಿ ಎಳೆಯಿರಿ. ಕುಣಿಕೆ ಮತ್ತು ಧಾವಕದ ತುದಿ ಸುತ್ತಿನ ಒಳಗೆ ಬರುವವರೆಗೂ ಎಳೆಯಿರಿ. ಧಾವಕದ ತುದಿಗಳನ್ನು ಕತ್ತರಿಸಿ.



(a) (b) (c) (d)

2. ಫ್ರೆಂಚ್ ವಿಧಾನ (French Whipping)

- ಹಗ್ಗದ ತುದಿಯ ಸ್ವಲ್ಪ ಕೆಳಗೆ ಒಂದು ಮೇಲುಗೈ ಮಲಕು ಗಂಟನ್ನು (Over Hand knot) ಹಾಕಿ ಸ್ಥಿರ ತುದಿಯನ್ನು ಹಗ್ಗದ ಮೇಲಿಡಿ.
- ಧಾವಕದ ತುದಿಯನ್ನು ಬಳಸಿ ಸ್ಥಿರ ತುದಿಯ ಮೇಲೆ ಅರ್ಧ ಮಲಕು ಗಂಟನ್ನು ಹಾಕುತ್ತಾ ಹೋಗಿರಿ.
- ಸ್ಥಿರ ತುದಿಯ ಕೊನೆಯನ್ನು ತಲುಪಿದಾಗ ಎರಡು ಅರ್ಧ ಮಲಕುಗಳ ಮೂಲಕ ಧಾವಕ ತುದಿಯನ್ನು ಹಾಯಿಸಿ ಬಿಗಿ ಮಾಡಿರಿ. ಹೆಚ್ಚಿನ ಭಾಗವನ್ನು ಕತ್ತರಿಸಿ.



3. ಪಡುನಾಡು ವಿಧಾನ (West Country Whipping)

ದಾರದಿಂದ ಹಗ್ಗದ ಸುತ್ತಲೂ ಒಂದು ಅರೆ ಗಂಟನ್ನು ಹಾಕಿರಿ. (Half Knot) ಮುಂದುವರೆದು ಹಗ್ಗದ ಹಿಂಭಾಗದಲ್ಲಿ ಅದೇ ರೀತಿ ಗಂಟನ್ನು ಹಾಕಿ.

ಇದೇ ರೀತಿ ಹಿಂದೆ-ಮುಂದೆ ಅರೆ ಗಂಟುಗಳನ್ನು ಹಾಕಿರಿ. ಕೊನೆಯಲ್ಲಿ 2-3 ಸಮಗಂಟುಗಳನ್ನು ಹಾಕಿ ಹಗ್ಗದ ಒಳಗೆ ಎಳೆದು ಹೆಚ್ಚಿನ ಭಾಗವನ್ನು ಕತ್ತರಿಸಿ.

ಗಂಟುಗಳು (Knots)

ಒಂದೇ ಹಗ್ಗದ ಎರಡು ತುದಿಗಳನ್ನು ಅಥವಾ ಎರಡು ಹಗ್ಗಗಳ ತುದಿಗಳನ್ನು ಗಂಟುಗಳ ಮೂಲಕ ಸೇರಿಸುತ್ತಾರೆ. ಈ ಪುಸ್ತಕದಲ್ಲಿ ಉಲ್ಲೇಖವಾಗಿರುವ ಗಂಟುಗಳನ್ನು ನಾಲ್ಕು ರೀತಿ ವಿಂಗಡಿಸಬಹುದು.

ಅ). ಬಂಧನ ಗಂಟುಗಳು (ಸಮಗಂಟು, ಮೂಲೆ ಗಂಟು, ಬೆಸ್ತರ ಗಂಟು)

ಆ). ಕುಣಿಕೆ ಗಂಟುಗಳು (ಕುಣಿಕೆ ಗಂಟು, ಇಕ್ಕುಣಿಕೆ ಗಂಟು, ಕುಣಿಯೊಳಗೆ ಕುಣಿಕೆ, ಅಗ್ನಿಶಾಮಕ ಕುರ್ಚಿ ಗಂಟು, ಏಣಿ ಗಂಟು)

ಇ). ಗಿಡ್ಡಮಾಡುವ ಗಂಟುಗಳು (ಕಣಕಾಲು ಗಂಟು)

ಈ). ತಡೆ ಗಂಟುಗಳು (8 ಆಕಾರದ ಗಂಟು)

1 .ಸಮಗಂಟು (Reef Knot / Square Knot):-

ಮುಖ್ಯ ಉದ್ದೇಶ

ಸಮ ಗಾತ್ರದ ಎರಡು ಹಗ್ಗಗಳನ್ನು ಜೋಡಿಸಲು ಅಥವಾ ಒಂದೇ ಹಗ್ಗದ ಎರಡು ತುದಿಗಳನ್ನು ಸೇರಿಸಲು.

ಎಲ್ಲೆಲ್ಲಿ ಬಳಕೆ

- ಪ್ರಥಮ ಚಿಕಿತ್ಸೆಯಲ್ಲಿ ಬ್ಯಾಂಡೇಜಿನ ತುದಿಗಳನ್ನು ಸೇರಿಸಲು.
- ಪಾರ್ಸಲ್‌ಗಳನ್ನು ಕಟ್ಟಲು

ವಿಧಾನ

ಹಗ್ಗದ ಎರಡು ತುದಿಗಳನ್ನು ಒಂದರ ಮೇಲೊಂದಿಟ್ಟು ಅರೆ ಗಂಟು ಹಾಕಿ ಪುನ: ಅದೇರೀತಿ ಒಂದರ ಮೇಲೊಂದನ್ನಿಟ್ಟು ಅರೆ ಗಂಟು ಹಾಕಿ ಎಳೆಯಿರಿ. (ಇದನ್ನು ಹೀಗೆ ನೆನಪಿಡಬಹುದು :- ಎಡದ ಮೇಲೆ ಬಲ ಮತ್ತು ಒಳಕ್ಕೆ, ಬಲದ ಮೇಲೆ ಎಡ ಮತ್ತು ಒಳಕ್ಕೆ)

2.ಮೂಲೆ ಗಂಟು /ನೇಯ್ಗೆಯವರ ಗಂಟು (Sheet bend Knot):-

ಮುಖ್ಯ ಉದ್ದೇಶ

ಅಸಮ ಗಾತ್ರದ ಹಗ್ಗಗಳನ್ನು ಸೇರಿಸಲು.

ಎಲ್ಲೆಲ್ಲಿ ಬಳಕೆ

- ಧ್ವಜಕ್ಕೆ ಹಗ್ಗ ಸೇರಿಸಲು
- ನಾವೆಯ ಹಾಯಿಗೆ ಹಗ್ಗ ಸೇರಿಸಲು

ವಿಧಾನ

ದಪ್ಪ ಹಗ್ಗದಲ್ಲಿ / ಬಟ್ಟೆಯ ಮೂಲೆಯಲ್ಲಿ ಒಂದು ಕುಣಿಕೆ ಮಾಡಿಕೊಂಡು ಅದರಲ್ಲಿ ಸಣ್ಣ ಹಗ್ಗವನ್ನು ಹಾಯಿಸಿ ದಪ್ಪ ಹಗ್ಗಕ್ಕೆ ಒಂದು ಸುತ್ತು ಹಾಕಿ ನಂತರ ಸಣ್ಣ ಹಗ್ಗದ ಕೆಳಗೆ ತೂರಿಸಿ ಎಳೆಯ ಬೇಕು.



3.ಕುಣಿಕೆ ಗಂಟು (Bowline Knot):-

ಮುಖ್ಯ ಉದ್ದೇಶ

ಹಗ್ಗದ ಕೊನೆಯಲ್ಲಿ ಜಾರದ ಕುಣಿಕೆ ಹಾಕಲು

ಎಲ್ಲೆಲ್ಲಿ ಬಳಕೆ

- ನೀರಿನಲ್ಲಿ ಮುಳುಗಿದವರನ್ನು ಹೊರಗೆ ಎಳೆದು ತರುವಾಗ
- ಬೆಂಕಿ ಅಪಘಾತದಲ್ಲಿ ಸಿಲುಕಿಕೊಂಡವರನ್ನು ಹೊರಗೆ ಎಳೆದು ತರುವಾಗ

ವಿಧಾನ

ಕುಣಿಕೆ ಮಾಡಬೇಕಾದ ತುದಿಯಲ್ಲಿ ಕುಣಿಕೆ ಮಾಡುವಷ್ಟು ಹಗ್ಗ ಬಿಟ್ಟು ಒಂದು ಮೇಲು ಗೈ ಕುಣಿಕೆ ಹಾಕಿಕೊಳ್ಳಬೇಕು. (Over hand loop) ಸಂಖ್ಯೆ 6 ಬರೆದಂತೆ ಇರಬೇಕು. ಅದನ್ನು ಎಡಗೈಯಲ್ಲಿ ಹಿಡಿದು ಧಾವಕದ ತುದಿಯನ್ನು ಒಳಗೆ ತೂರಿಸಿ ಹಗ್ಗದ ಮೇಲ್ಭಾಗವನ್ನು ಬಲಗಡೆಯಿಂದ ಬಳಸಿ, ಪನ: ಕುಣಿಕೆಯ ಒಳಗೆ ತೂರಿಸಿ ಬಿಗಿ ಮಾಡಬೇಕು.



4. ಕಣಕಾಲು ಗಂಟು (Sheepshank Knot):-

ಮುಖ್ಯ ಉದ್ದೇಶ

ಹಗ್ಗದ ಮಡಿಕೆಗಳನ್ನು ಬಿಗಿಸಲು

ಎಲ್ಲೆಲ್ಲಿ ಬಳಕೆ

- ಹಗ್ಗವನ್ನು ಕತ್ತರಿಸದೆ ಅದರ ಉದ್ದವನ್ನು ಕಡಿಮೆ ಮಾಡಲು
- ಹಗ್ಗದ ದುರ್ಬಲ ಭಾಗಕ್ಕೆ ಬಲ ನೀಡಲು

ವಿಧಾನ

ಅಪೇಕ್ಷಿತ ಭಾಗದಲ್ಲಿ ಹಗ್ಗವನ್ನು ಮೂರು ಮಡಿಕೆಗಳಾಗಿ ಮಾಡಿಕೊಳ್ಳಬೇಕು. ಮಡಿಕೆಗಳ ಎರಡೂ ತುದಿಗಳಲ್ಲಿ ಮಲುಕುಗಳನ್ನು ಹಾಕಬೇಕು. ಅವಶ್ಯಕವಿದ್ದರೆ ಕುಣಿಯೊಳಗೆ ಕಡ್ಡಿಯನ್ನು ಹಾಯಿಸಬಹುದು.



5. ಅಗ್ನಿಶಾಮಕ ಕುರ್ಚಿ ಗಂಟು (Fireman's Chair Knot):-

<u>ಮುಖ್ಯ ಉದ್ದೇಶ</u>

ಹಗ್ಗದ ಒಂದು ತುದಿಯಲ್ಲಿ ಎರಡು ಕುಣಿಕೆಗಳನ್ನು ಮಾಡಲು

ಎಲ್ಲೆಲ್ಲಿ ಬಳಕೆ

- ರೋಗಿಯನ್ನು, ಪ್ರಜ್ಞೆ ತಪ್ಪಿದವರನ್ನು, ಅಗ್ನಿ ಅಪಘಾತದಲ್ಲಿ ಸಿಲುಕಿಕೊಂಡವರನ್ನು ಮೇಲಿನಿಂದ ಕೆಳಗಿಳಿಸಲು

ವಿಧಾನ

ಹಗ್ಗದ ಮಧ್ಯ ಭಾಗದಲ್ಲಿ ಎಡದ ಕೆಳಗೆ ಬಲ ಬರುವಂತೆ ಅರ್ಧ ಮಲುಕನ್ನು ಹಾಕಿ. (Half Hitch) ಅದರ ಪಕ್ಕದಲ್ಲಿ ಮತ್ತೊಂದು ಅರ್ಧ ಮಲುಕನ್ನು ಹಾಕಿ. ಈ ಮಲುಕುಗಳನ್ನು ಒಂದರ ಮೇಲೊಂದು ಇಟ್ಟು ಅವುಗಳ ಒಂದೊಂದು ಭಾಗಗಳು ಒಳ ಹೋಗುವಂತೆ ಎಳೆಯಿರಿ. ಎರಡೂಕಡೆ ಎಷ್ಟು ಅವಶ್ಯವೋ ಅಷ್ಟು ಕುಣಿಕೆ ಬರುವವರೆಗೆ ಎಳೆಯಿರಿ. ಎರಡೂ ಕಡೆಗಳಲ್ಲಿ ಅರ್ಧ ಮಲುಕುಗಳನ್ನು ಹಾಕಿ ಬಿಗಿಯಿರಿ.

ಬಳಸುವಾಗ ಒಂದು ಕುಣಿಕೆಯನ್ನು ಕಂಕುಳ ಕೆಳಗೆ ಹಾಗೂ ಮತ್ತೊಂದನ್ನು ಕಾಲುಗಳ ಕೆಳಗೆ ಹಾಕಬೇಕು.



6. ಬೆಸ್ತರ ಗಂಟು(Fisher Man's Knot):-

ಮುಖ್ಯ ಉದ್ದೇಶ

ಒದ್ದೆಯಾದ ಅಥವಾ ಜಾರುವಂತಿರುವ ಎರಡು ಹಗ್ಗಗಳನ್ನು ಸೇರಿಸಲು.

ಎಲ್ಲೆಲ್ಲಿ ಬಳಕೆ

- ಶಿಬಿರಗಳಲ್ಲಿ ಒದ್ದೆ ಹಗ್ಗಗಳನ್ನು ಸೇರಿಸಲು.
- ಬೆಸ್ತರು ಹಗ್ಗಗಳನ್ನು ಸೇರಿಸಲು

ವಿಧಾನ

ಎರಡು ಹಗ್ಗಗಳ ತುದಿಗಳನ್ನು ಒಂದರ ಪಕ್ಕ ಒಂದನ್ನಿಡಬೇಕು. ಪರಸ್ಪರ ಅರೆ ಗಂಟುಗಳನ್ನು ಹಾಕಿ, ಎಳೆಯ ಬೇಕು. ಆ ಗಂಟುಗಳು ಪರಸ್ಪರ ತಡೆಯಾಗಿರುತ್ತವೆ.



7. ಕುಣಿಕೆಯೊಳಗಿನ ಕುಣಿಕೆ ಗಂಟು
(Bowline on bight Knot):-

ಮುಖ್ಯ ಉದ್ದೇಶ

ಹಗ್ಗದ ಮಧ್ಯದಲ್ಲಿ ಜಾರದಂತಿರುವ ಎರಡು ಕುಣಿಕೆಗಳನ್ನು ಮಾಡಲು.

ಎಲ್ಲೆಲ್ಲಿ ಬಳಕೆ

- ಪರ್ವತಾರೋಹಣದಲ್ಲಿ ಮೇಲಕ್ಕೇರಲು

ವಿಧಾನ

ಹಗ್ಗದ ಮಧ್ಯದಲ್ಲಿ ಕುಣಿಯನ್ನು ಮಾಡಬೇಕು. ನಂತರ ಒಂದು ಮಲುಕು ಹಾಕಿ ಕುಣಿಕೆ ಮಾಡಬೇಕು. ಕುಣಿಯನ್ನು ಈ ಕುಣಿಕೆಯ ಮೂಲಕ ಹಾಯಿಸಿ ತೆರೆದು ಇಡೀ ಗಂಟನ್ನು ಸುತ್ತುವರೆದು ಹಗ್ಗದ ಎರೆಡೂ ತುದಿಗಳನ್ನು ಆವರಿಸಿದ ನಂತರ ಗಂಟನ್ನು ಬಿಗಿ ಮಾಡಬೇಕು



8. ಇಕ್ಕುಣಿಕೆ ಗಂಟು
(Double Bowline Knot):-

ಮುಖ್ಯ ಉದ್ದೇಶ

ಕುಣಿಕೆ ಗಂಟಿನಂತೆಯೇ

ಎಲ್ಲೆಲ್ಲಿ ಬಳಕೆ

- ಕುಣಿಕೆ ಗಂಟಿನಂತೆಯೇ ಬಳಕೆ. ಆದರೆ ಅದಕ್ಕಿಂತಲೂ ಹೆಚ್ಚು ಬಲ ಬೇಕಾದಾಗ

ವಿಧಾನ

ಒಚಿದು ಸುತ್ತು ಕುಣಿಯ ಬದಲು ಎರಡು ಸುತ್ತು ಹಾಕಬೇಕು. ಉಳಿದಂತೆ, ಕುಣಿಕೆ ಗಂಟಿನಂತೆಯೇ ಮುಂದುವರೆಯಬೇಕು.

9. ಏಣಿ ಗಂಟು (Man Harness Knot):-

<u>ಮುಖ್ಯ ಉದ್ದೇಶ</u>

ಹಗ್ಗದಲ್ಲಿ ಚಿಕ್ಕ-ಚಿಕ್ಕ ಕುಣಿಕೆಗಳನ್ನು ಮಾಡಲು.

ಎಲ್ಲೆಲ್ಲಿ ಬಳಕೆ

- ಭಾರವಾದ ವಸ್ತುವನ್ನು ಅನೇಕ ಮಂದಿ ಸೇರಿ ಎಳೆಯಬೇಕಾದರೆ ಈ ಗಂಟುಗಳನ್ನು ಹಾಕಿ ಒಬ್ಬ ವ್ಯಕ್ತಿ ಒಂದು ಕುಣಿಕೆ ಹಿಡಿದು ಎಳೆಯಬಹುದು.
- ಹಗ್ಗದಲ್ಲಿ ಈ ಗಂಟುಗಳನ್ನು ಹಾಕಿ ಏಣಿಯಂತೆ ಬಳಸಬಹುದು.

ವಿಧಾನ

ಹಗ್ಗದ ಒಂದು ತುದಿಯನ್ನು ಉಳಿದ ಭಾಗದ ಮೇಲೆ ಹಾಕಿ Q ಅಕ್ಷರ ಬರುವಂತೆ ಕುಣಿಕೆ ಮಾಡಿ ಧಾವಕದ ತುದಿಯನ್ನು Q ವಿನ ಎರಡೂ ಬಾಹುಗಳ ಕೆಳಗೆ ಬರುವಂತೆ ತೂರಿಸಿ ಮತ್ತೆ Q ನ ಕೆಳಭಾಗದ ಅಂಚನ್ನು ಎಳೆದು ಧಾವಕದ ತುದಿಯ ಕೆಳಗೆ ತಂದು Q ವಿನ ಮೇಲಿನ ಅಂಚಿನ ಮೇಲ್ಭಾಗದಿಂದ ಗಂಟನ್ನು ಬಿಗಿ ಮಾಡಿ.



10. ಎಂಟು ಆಕಾರದ ಗಂಟು

(Figure of Eight Knot):-

<u>ಮುಖ್ಯ ಉದ್ದೇಶ</u>

ತಡೆಯ ಗಂಟಾಗಿ ಬಳಕೆ

ಎಲ್ಲೆಲ್ಲಿ ಬಳಕೆ

- ಹಗ್ಗದ ಕೊನೆ ಜಿಜ್ಜಿಕೊಳ್ಳದಂತಿರಲು
- ಪರ್ವತಾರೋಹಣದಲ್ಲಿ

ವಿಧಾನ

ಧಾವಕದ ತುದಿಯಲ್ಲಿ ಒಂದು ಕುಣಿಕೆ ಮಾಡಿಕೊಳ್ಳಿ. ಮುಂದುವರೆದು ಸ್ಥಿರ ತುದಿಯ ಕೆಳಗಿನಿಂದ ಸುತ್ತುವರೆದು, ಕುಣಿಕೆಯೊಳಗೆ ಹಾಯಿಸಿ ಬಿಗಿ ಮಾಡಿ.



ಅಧ್ಯಾಯ 4

ಮಲಕುಗಳು (Hitches)

1. ಕೊಟ್ಟಿಗೆ ಗಂಟು (Clove Hitch)

ಮುಖ್ಯ ಉದ್ದೇಶ

ಹಗ್ಗದ ತುದಿಯನ್ನು ಒಂದು ಗೂಟಕ್ಕೆ ಅಥವಾ ಕಂಬಕ್ಕೆ ಅಥವಾ ಯಾವುದೇ ಸ್ಥಿರವಾದ ವಸ್ತುವಿಗೆ ಬಂಧಿಸಲು

ಎಲ್ಲೆಲ್ಲಿ ಬಳಕೆ

- ಚೌಕಕಟ್ಟು, ಎಂಟು ಆಕಾರದ ಕಟ್ಟು ಮತ್ತು ಕತ್ತರಿ ಕಟ್ಟುಗಳನ್ನು ಕಟ್ಟುವಾಗ ಪ್ರಾರಂಭದಲ್ಲಿ

  ಹೂವು ಕಟ್ಟುವವರು, ಜಾನುವಾರುಗಳನ್ನು ಕಟ್ಟುವವರು ಬಳಸುತ್ತಾರೆ

ವಿಧಾನ

1. ಹಗ್ಗದ ಧಾವಕದ ತುದಿಯನ್ನು ಕಂಬದ ಸುತ್ತಲೂ ತರಬೇಕು. ಸ್ಥಿರ ತುದಿಯನ್ನು ಬಳಸಿದಂತೆ ಮಾಡಿ, ಪುನ: ಕಂಬವನ್ನು ಸುತ್ತುವರಿಯಬೇಕು. ಅಂತಿಮ ಸುತ್ತುವಿಕೆಯ ಕೆಳಗೆ ಹಾಯಿಸಿ ಬಿಗಿ ಮಾಡಬೇಕು.

2. ವಿರುದ್ಧ ದಿಕ್ಕಿನ ಎರಡು ಕುಣಿಕೆಗಳನ್ನು ಮಾಡಿಕೊಳ್ಳಬೇಕು. ಒಂದರ ಮೇಲೆ ಒಂದನ್ನು ಇಟ್ಟು ಕಂಬದ ಮೇಲಿನಿಂದ ಆ ಕುಣಿಕೆಗಳನ್ನು ಹಾಯಿಸಿ ಬಿಗಿ ಮಾಡಬೇಕು.

ವಿಧಾನ 1

ವಿಧಾನ 2



2 . ಒಂದು ಸುತ್ತು ಎರಡು ಮಲಕು ಗಂಟು
(Round Turn and Two Half Hitchs)

ಮುಖ್ಯ ಉದ್ದೇಶ

ಹಗ್ಗದ ಒಂದು ತುದಿಯಲ್ಲಿ ಜಗಿತ ಇದ್ದು, ಮತ್ತೊಂದು ತುದಿಯನ್ನು ಕಂಬಕ್ಕೆ ಅಥವಾ ಸ್ಥಿರವಾದ ವಸ್ತುವಿಗೆ ಬಂಧಿಸಲು

ಎಲ್ಲೆಲ್ಲಿ ಬಳಕೆ

- ಗುಡಾರದ ಹಗ್ಗಗಳನ್ನು ಗೂಟಕ್ಕೆ ಕಟ್ಟಲು
- ಧ್ವಜಸ್ತಂಭವನ್ನು ಗೂಟಗಳಿಗೆ ಬಂಧಿಸಲು

ವಿಧಾನ

ಧಾವಕದ ತುದಿಯನ್ನು ಸ್ಥಿರವಾದ ವಸ್ತುವಿಗೆ ಪೂರ್ಣ ಒಂದು ಸುತ್ತು ಬರುವಂತೆ ಹಾಕಿ, ಸ್ಥಿರ ತುದಿಯಲ್ಲಿ ಎರಡು ಅರ್ಧ ಮಲಕುಗಳನ್ನು ಹಾಕಬೇಕು. ನಂತರ ಈ ಮಲಕುಗಳನ್ನು ಪರಸ್ಪರ ಹೊಂದಿಕೊಳ್ಳುವಂತೆ ಸರಿಸಬೇಕು.



3. ದಿಮ್ಮಿ ಗಂಟು (Timber Hitch)

ಮುಖ್ಯ ಉದ್ದೇಶ

ಹಗ್ಗವನ್ನು ಸ್ಥಿರವಾದ ಭಾಗಕ್ಕೆ ಹೆಚ್ಚು ಭದ್ರವಾಗಿ ಬಿಗಿಸಲು

ಎಲ್ಲೆಲ್ಲಿ ಬಳಕೆ

- ದಪ್ಪಗಾತ್ರದ ದಿಮ್ಮಿಗಳನ್ನು ಎಳೆಯಲು (ಈ ಸಂದರ್ಭದಲ್ಲಿ ಮುಂಭಾಗದಲ್ಲಿ ಒಂದು ಅರ್ಧ ಮಲಕನ್ನು ಹಾಕುತ್ತಾರೆ).
- ಹೊರೆ ಕಟ್ಟಲು
- ಕರ್ಣ ಕಟ್ಟನ್ನು ಈ ಗಂಟಿನಿಂದ ಪ್ರಾರಂಭಿಸುತ್ತಾರೆ

ವಿಧಾನ

ಧಾವಕದ ತುದಿಯನ್ನು ಸ್ಥಿರವಾದ ವಸ್ತುವಿಗೆ ಪೂರ್ಣ ಒಂದು ಸುತ್ತು ಬರುವಂತೆ ಹಾಕಿ, ಸ್ಥಿರ ತುದಿಯಲ್ಲಿ ಎರಡು ಅರ್ಧ ಮಲಕುಗಳನ್ನು ಹಾಕಬೇಕು. ನಂತರ ಈ ಮಲಕುಗಳನ್ನು ಪರಸ್ಪರ ಹೊಂದಿಕೊಳ್ಳುವಂತೆ ಸರಿಸಬೇಕು.



4. ಸುರುಳಿ ಮಲಕು ಗಂಟು (Rolling Hitch)

ಮುಖ್ಯ ಉದ್ದೇಶ

ಸ್ಥಿರವಾದ ಸ್ತಂಭ ಅಥವಾ ಹಗ್ಗಕ್ಕೆ ಮತ್ತೊಂದು ಹಗ್ಗವನ್ನು ಕಿರಿದಾದ ಕೋನದಲ್ಲಿ ಕಟ್ಟಬೇಕಾದಾಗ ಮತ್ತು ಅದು ಜಾರುವಂತಿದ್ದಾಗ.

ಎಲ್ಲೆಲ್ಲಿ ಬಳಕೆ

- ಧ್ವಜಸ್ತಂಭ ತಯಾರಿಸುವಾಗ ಸ್ತಂಭದ ಎಳೆತ ಹಗ್ಗ (Guy Line) ಜಾರುವಂತಿದ್ದರೆ ಅಥವಾ ಕಿರಿದಾದ ಕೋನದಲ್ಲಿದ್ದರೆ ಕೊಟ್ಟಿಗೆ ಗಂಟಿನ ಬದಲು
- ಕಟ್ಟಡ ಕಟ್ಟುವಾಗ ಭಾರವಾದ ವಸ್ತುಗಳನ್ನು ಮೇಲಕ್ಕೆ ಅಥವಾ ಕೆಳಕ್ಕೆ ಸಾಗಿಸುವ ಹಗ್ಗಕ್ಕೆ ಮತ್ತೊಂದು ಸಣ್ಣ ಹಗ್ಗದಿಂದ ಈ ಗಂಟನ್ನು ಕಟ್ಟಿ ಭಾರವನ್ನು ಒಂದು ಪಕ್ಕಕ್ಕೆ ಎಳೆಯಲು

ವಿಧಾನ

ಕೊಟ್ಟಿಗೆ ಗಂಟಿನಂತೆಯೇ ಪ್ರಾರಂಭಿಸಿ ಮತ್ತೊಂದು ಸುತ್ತು ಹಾಕಿ ಮುಗಿಸಬೇಕು. ಎಳೆತ ಯಾವ ಕಡೆಗೆ ಇದೆಯೋ ಆ ಕಡೆ ಎರಡು ಸುತ್ತುಗಳು ಇರಬೇಕು.



5. ಹಗ್ಗ ಸಲಾಕೆ ಗಂಟು /ಸನ್ನೆ ಗಂಟು
(Marline Spike Hitch/ Lever Hitch)

ಮುಖ್ಯ ಉದ್ದೇಶ

"ಹಿಡಿಕೆ" ಮಾಡುವ ಉದ್ದೇಶದಿಂದ ಹಗ್ಗವನ್ನು ದಂಡ ಅಥವಾ ಸಲಾಕೆಗೆ ಬಂಧಿಸುವ ತಾತ್ಕಾಲಿಕ ಗಂಟು

ಎಲ್ಲೆಲ್ಲಿ ಬಳಕೆ

- ಏಣಿ ಮೆಟ್ಟಿಲು ತಯಾರಿಸಲು
- ಶಿಬಿರಗಳಲ್ಲಿ ಬಟ್ಟೆ ಒಣಹಾಕುವ ಸಾಧನ ತಯಾರಿಸಲು

ವಿಧಾನ

ಹಗ್ಗದಲ್ಲಿ ಒಂದು ಕುಣಿಕೆ ಮಾಡಿಕೊಳ್ಳಬೇಕು. ಸ್ಥಿರಭಾಗದ ಹಗ್ಗವನ್ನು ಅದರೊಳಗೆ ಹಾಯಿಸಿ ಮತ್ತೊಂದು ಕುಣಿಕೆ ಮಾಡಿಕೊಂಡು ಅದರ ಮೂಲಕ ಸಲಾಕೆ ಅಥವಾ ದಂಡವನ್ನು ಹಾಯಿಸಿ ಬಿಗಿ ಮಾಡಬೇಕು. (ಸ್ಥಿರ ಭಾಗವನ್ನು ಎಳೆಯಬೇಕು). ಇದೇ ರೀತಿ ದಂಡದ ಮತ್ತೊಂದು ತುದಿಯನ್ನು ಇನ್ನೊಂದು ಹಗ್ಗದ ಕುಣಿಕೆಯಲ್ಲಿ ಹಾಯಿಸಿದರೆ ಒಂದು ಮೆಟ್ಟಿಲು ಸಿದ್ಧ



6. ಸೆಳೆತ ಗಂಟು /ದಾರಿಗಳ್ಳನ ಗಂಟು
(Draw Hitch/ Highway Man's Hitch)

ಮುಖ್ಯ ಉದ್ದೇಶ

ಸುಲಭವಾಗಿ ಹಾಗೂ ಶೀಘ್ರವಾಗಿ ಬಿಚ್ಚಲು ಅನುಕೂಲವಾಗುವಂತೆ ಒಂದು ಭಾರದ ವಸ್ತುವನ್ನು ತಾತ್ಕಾಲಿಕವಾಗಿ ಸ್ಥಿರವಾದ ವಸ್ತುವಿಗೆ ಬಂಧಿಸುವ ಕುಣಿಕೆ ಮಾಡಲು.

ಎಲ್ಲೆಲ್ಲಿ ಬಳಕೆ

- ಮರದ ಕೊಂಬೆಗೆ ಈ ಗಂಟನ್ನು ಹಾಕಿ ಅದರ ಸಹಾಯದಿಂದ ಹಳ್ಳ ಅಥವಾ ತೊರೆ ದಾಟಲು
- ಭಾರವಾದ ವಸ್ತುಗಳನ್ನು ಹಳ್ಳದ ಅಥವಾ ತೊರೆಯ ಇನ್ನೊಂದು ಭಾಗಕ್ಕೆ ತಲುಪಿಸಲು
- ದೋಣಿಯನ್ನು ಲಂಗರ್‌ಗೆ ಕಟ್ಟಲು
- ಮರದಿಂದ ಇಳಿಯಲು
- ಭಾರಿಯಾದ ಅಗ್ರಗಾಮಿ ಯೋಜನೆಗಳನ್ನು (ದ್ವಾರಗಳು, ಗೋಪುರಗಳು, ಇತ್ಯಾದಿ)ಎತ್ತಿ ನಿಲ್ಲಿಸಲು

  (ಈ ಸಂದರ್ಭದಲ್ಲಿ ಗಂಟನ್ನು ಹಗ್ಗದ ಮಧ್ಯಭಾಗದಲ್ಲಿ ಹಾಕಿದರೆ, ಹಗ್ಗದ ಎರಡೂ ಕೊನೆಗಳು ಕೈಗೆ ಸಿಗುವಂತಿರುತ್ತವೆ. ಸ್ಥಿರ ತುದಿಯನ್ನು ಬಳಸಿ ಭಾರವನ್ನು ಎತ್ತಬೇಕು. ಧಾವಕದ ತುದಿಯನ್ನು ಎಳೆದು ಗಂಟನ್ನು ಬಿಚ್ಚಬಹುದು).

ವಿಧಾನ

ಹಗ್ಗದ ಅಪೇಕ್ಷಿತ ಭಾಗದಲ್ಲಿ ಕುಣಿಯನ್ನು ಮಾಡಿ, ಸ್ಥಿರಭಾಗದ ಹಿಂದೆ ಇಡಬೇಕು. (ಮರದ ಕೊಂಬೆ, ದಂಡ, ಇತ್ಯಾದಿ) ಎಡಭಾಗದ ಹಗ್ಗದಲ್ಲಿ ಮತ್ತೊಂದು ಕುಣಿ ಮಾಡಿ, ಸ್ಥಿರ ವಸ್ತುವಿನ ಮುಂಭಾಗದಿಂದ ತಂದು ಮೊದಲಿನ ಕುಣಿಯ ಒಳಗೆ ಸೇರಿಸಿ, ಬಿಗಿ ಮಾಡಬೇಕು. ಇದೇ ರೀತಿ ಬಲಭಾಗದಲ್ಲಿ ಕುಣಿ ಮಾಡಿ, ಅದನ್ನು ಎಡಭಾಗದ ಕುಣಿಯ ಒಳಗೆ ಸೇರಿಸಿ ಬಿಗಿ ಮಾಡಬೇಕು. ಈಗ ಎಡಭಾಗದ ಹಗ್ಗ ಸ್ಥಿರಭಾಗ (ಭಾರ ಹಾಕಬೇಕಾದ ಭಾಗ), ಬಲಭಾಗದ ಭಾಗ ಧಾವಕ ಭಾಗ (ಬಿಚ್ಚುವ ಭಾಗ).

ಎಚ್ಚರಿಕೆ :- ಸ್ಥಿರಭಾಗ ಹಾಗೂ ಧಾವಕದ ಭಾಗಗಳನ್ನು ಗುರುತಿಸಿಕೊಂಡಿರಬೇಕು. ತಪ್ಪಿದಲ್ಲಿ ಅಪಾಯ.

ಗಮನಿಸಿ :- ಗಂಟನ್ನು ಹಾಕುವಾಗ ಎಡಭಾಗ ಮತ್ತು ಬಲಭಾಗಗಳನ್ನು ಅದಲು ಬದಲು ಮಾಡಿ ಹಾಕಬಹುದು.

Left Side

Left Side



Left Side Bight
Right Side

Left Side Bight

Right Side Bight
Pull Down
on the Left Side


Left Side
(Standing
Part)
STRAIN
Right Side
(Free End)
RELEASE

7. ಮಾರ್ಜಾಲ ಪಾದ (Cat's Paw)

<u>ಮುಖ್ಯ ಉದ್ದೇಶ</u>

ಹಗ್ಗವನ್ನು ಸ್ಥಿರವಾದ ವಸ್ತುವಿಗೆ (ಕಂಬ, ಸಲಾಕೆ, ಕೊಂಡಿ, ಇತ್ಯಾದಿ) ಸೇರಿಸಲು

ಎಲ್ಲೆಲ್ಲಿ ಬಳಕೆ

- ಭಾರವಾದ ವಸ್ತುಗಳನ್ನು ಕೊಂಡಿಯಿಂದ ಅಥವಾ ಬಳೆಯಿಂದ ತೂಗು ಬಿಡಲು
- ಬಳೆ ಹೊಂದಿರುವ ಭಾರವಾದ ವಸ್ತುಗಳನ್ನು ಎಳೆಯಲು



ಹಗ್ಗದ ಮಧ್ಯಭಾಗದಲ್ಲಿ ಎರಡು ಕುಣಿಗಳನ್ನು ಮಾಡಿಕೊಳ್ಳಬೇಕು. ಎರಡೂ ಕೈಗಳ ಬೆರಳುಗಳಲ್ಲಿ ಕುಣಿಯನ್ನು ಹಿಡಿದುಕೊಂಡು, ವಿರುದ್ಧ ದಿಕ್ಕುಗಳಲ್ಲಿ 5 ಬಾರಿ ತಿರುಗಿಸಿ ಸುತ್ತಬೇಕು. ಬೆರಳುಗಳಲ್ಲಿ ಉಂಟಾಗಿರುವ ಎರಡು ಕುಣಿಕೆಗಳನ್ನು ಕೊಂಡಿಗೆ ಸೇರಿಸಿ ಬಿಗಿ ಮಾಡಬೇಕು. ಕೊಂಡಿಯಿಂದ ಹೊರ ತೆಗೆದಾಗ ಕೊಂಡಿ ತಾನಾಗಿ ಬಿಚ್ಚಿಕೊಳ್ಳುತ್ತದೆ.

ಹಿಂದೆ ಮಾಡಿದಂತೆ ಕುಣಿಯನ್ನು ಮಾಡಿಕೊಂಡು ಅದನ್ನು ಬಳೆಯ ತಳಭಾಗದಲ್ಲಿಡಬೇಕು. ಕುಣಿಯನ್ನು ಬಳೆಯ ಮೇಲಿನಿಂದ ಮುಂದೆ ತಂದು ಹಗ್ಗದ ಎರಡೂ ಭಾಗಗಳನ್ನು ಅದರೊಳಗೆ ಹಾಯಿಸಿ ನಾಲ್ಕೈದು ಬಾರಿ ಸುತ್ತಬೇಕು. ನಂತರ ಬಿಗಿ ಮಾಡಬೇಕು.

ಗಮನಿಸಿ :- ಈ ಗಂಟನ್ನು ಹಗ್ಗದ ಮಧ್ಯಭಾಗವನ್ನು ಬಳಸಿಯೇ ಹಾಕಬೇಕು. ಹಗ್ಗದ ಎರಡೂ ತುದಿಗಳನ್ನು ಬಳಸಿ ಎಳೆಯಬೇಕು. ಒಂದನ್ನು ಎಳೆದರೆ ಗಂಟು ಜಾರುವ ಸಂದರ್ಭ ಇರುತ್ತದೆ.

8. ಬೆಸ್ತರ ಬಾಗು (Fishermen's Bend)

ಮುಖ್ಯ ಉದ್ದೇಶ

ಹಗ್ಗವನ್ನು ಸ್ಥಿರವಸ್ತುವಿಗೆ ಜಾರದಂತೆ ಹೆಚ್ಚು ಭದ್ರವಾಗಿ ಬಂಧಿಸಲು.

ಎಲ್ಲೆಲ್ಲಿ ಬಳಕೆ

- ಗುಡಾರದ ಹಗ್ಗಗಳನ್ನು, ಅಗ್ರಗಾಮಿ ಯೋಜನೆಗಳ ಹಗ್ಗಗಳನ್ನು, ನೆಲದಲ್ಲಿರುವ ಬಳೆಗಳಿಗೆ ಬಂಧಿಸಲು
- ದೋಣಿಗಳ ಲಂಗರು ಹಗ್ಗವನ್ನು ಲಂಗರಿಗೆ ಬಂಧಿಸಲು

ವಿಧಾನ

ಒಂದು ಸುತ್ತು ಎರಡು ಮಲಕು ಗಂಟಿನಂತೆಯೇ ಸುತ್ತುಗಳನ್ನು ಹಾಕಿ ಧಾವಕದ ತುದಿಯನ್ನು ಸುತ್ತುಗಳ ಒಳಗೆ ಹಾಯಿಸಿ ಬಿಗಿ ಮಾಡಬೇಕು. ನಂತರ ಮುಂಭಾಗದಲ್ಲಿ ಎರಡು ಅರ್ಧ ಮಲಕುಗಳನ್ನು ಹಾಕಬೇಕು.



ಅಧ್ಯಾಯ 5

ಕಟ್ಟುಗಳು (Lashings)

ಎರಡು ಅಥವಾ ಮೂರು ಕಂಬಗಳನ್ನು / ದಂಡಗಳನ್ನು ಪರಸ್ಪರ ಬಂದಿಸಲು ಕಟ್ಟುಗಳನ್ನು ಹಾಕುತ್ತಾರೆ ಸಾಮನ್ಯವಾಗಿ ಕಟ್ಟುಗಳನ್ನು ಕೋಟ್ಟಿಗೆ ಗಂಟಿನಿಂದ ಪ್ರಾರಂಭಿಸಿ ಕೋಟ್ಟಿಗೆ ಗಂಟಿನಲ್ಲಿ ಮುಕ್ತಾಯಗೊಳಿಸಲಾಗುತ್ತದೆ. (ಕರ್ಣ ಕಟ್ಟನ್ನು ಮಾತ್ರ ದಿಮ್ಮಿಗಂಟಿನಿಂದ ಪ್ರಾರಂಬಿಸಲಾಗುತ್ತದೆ)

ಕಟ್ಟುಗಳನ್ನು ಹಾಕುವಾಗ ಸುತ್ತುವಿಕೆ (wrapping) ಮತ್ತು ಬಿಗಿ ಸುತ್ತುವಿಕೆ (Frapping) ಮುಖ್ಯವಾದ ಕ್ರಿಯೆಗಳು. ಸುತ್ತುವಿಕೆಯಿಂದ ದಂಡಗಳು ಬಂಧಿಸಲ್ಪಟರೆ ಬಿಗಿಸುತ್ತುವಿಕೆಯಿಂದ ಸುತ್ತುಗಳು ಬಿಗಿಯಾಗುತ್ತವೆ. ಆದರೆ ಎಲ್ಲಾ ಸಂಧರ್ಭಗಳಲ್ಲಿ ಬಿಗಿ ಸುತ್ತುಗಳನ್ನು ಹಾಕುವುದಿಲ್ಲ. (ಉ: ಸಮಾಂತರ ಕಟ್ಟು) ಸಾಮಾನ್ಯವಾಗಿ 3 ಸುತ್ತುಗಳು ಮತ್ತು 2 ಬಿಗಿ ಸುತ್ತುಗಳು ಎಂಬ ಸೂತ್ರವಿದೆ ಆದರೆ ಸಂಧರ್ಭನುಸಾರ ಇದನ್ನು ಹೆಚ್ಚಿಸಬಹುದು.

1. ಚೌಕಕಟ್ಟು (Square Lashing)

ಮುಖ್ಯ ಉದ್ದೇಶ

ಎರಡು ಕಂಬಗಳನ್ನು / ದಂಡಗಳನ್ನು / ಸಲಾಕೆಗಳನ್ನು (ಲಂಬ ಮತ್ತು ಅಡ್ಡ) ಸೇರಿಸಿ ಬಂಧಿಸಲು.

ಎಲ್ಲೆಲ್ಲಿ ಬಳಕೆ

- ಅಗ್ರಗಾಮಿ ಯೋಜನೆಗಳ ತಯಾರಿಕೆಯಲ್ಲಿ
- ಕಟ್ಟಡ ನಿರ್ಮಾಣ ಸಮಯದಲ್ಲಿ
- ಶಿಬಿರೋಪಕರಣಗಳ ತಯಾರಿಕೆಯಲ್ಲಿ

ವಿಧಾನ

ಒಂದು ದಂಡಕ್ಕೆ ಕೊಟ್ಟಿಗೆ ಗಂಟನ್ನು ಹಾಕಿ ಅದರ ಮೇಲೆ ಗಂಟಿನ ಪಕ್ಕದಲ್ಲಿರುವಂತೆ ಇನ್ನೊಂದು ದಂಡವನ್ನು ಲಂಬವಾಗಿ ಇಡಬೇಕು. ಕೊಟ್ಟಿಗೆ ಗಂಟು ಮುಕ್ತಾಯವಾಗಿರುವ ಕಡೆ ಉಳಿದಿರುವ ಹಗ್ಗದ ದಾವಕದ ಕೊನೆಯನ್ನು ಸ್ಥಿರಕೊನೆಯೊಂದಿಗೆ ಹೊಸೆದುಕೊಂಡು ಮೇಲೆ ಇಟ್ಟಿರುವ ದಂಡವನ್ನು ಹಾದು ಕೆಳಗಿನ ದಂಡಕದ ಕೆಳಭಾಗದಿಂದ ಪುನ: ಮೇಲ್ಭಾಗದ ದಂಡವನ್ನು ಹಾದು ಮತ್ತೆ ಕೆಳಭಾಗದ ದಂಡದ ಕೆಳಗೆ ಹಾಯಿಸಬೇಕು. ಇದನ್ನು ಹೀಗೇ ಮುಂದುವರೆಸಿ ಮೂರು ಅಥವಾ ನಾಲ್ಕು ಸುತ್ತುಗಳನ್ನು (Wrapping) ಬಿಗಿಯಾಗಿ ಹಾಕಬೇಕು. ನಂತರ ಎರಡು ದಂಡಗಳ ಮಧ್ಯದಲ್ಲಿ ಈ ಮೊದಲು ಹಾಕಿದ ಸುತ್ತುಗಳನ್ನು ಸುತ್ತುವರೆಯುವಂತೆ ಎರಡು ಅಥವಾ ಮೂರು ಬಿಗಿ ಸುತ್ತುಗಳನ್ನು (Frapping) ಹಾಕಿ ಪ್ರಾರಂಭದಲ್ಲಿ ಹಾಕಿದ ಕೊಟ್ಟಿಗೆ ಗಂಟಿಗೆ ವಿರುದ್ಧ ಭಾಗದಲ್ಲಿ ಮತ್ತೊಂದು ಕೊಟ್ಟಿಗೆ ಗಂಟನ್ನು ಹಾಕಿ ಮುಕ್ತಾಯಗೊಳಿಸಬೇಕು.

SQUARE LASHING



2. ಕರ್ಣ ಕಟ್ಟು (Diagonal Lashing)

ಮುಖ್ಯ ಉದ್ದೇಶ

ಕಿರಿದಾದ (45 ಡಿಗ್ರಿ ಗಿಂತ ಕಡಿಮೆ) ಕೋನದಲ್ಲಿರುವ ಅಥವಾ ಪರಸ್ಪರ ಸ್ಥಳ ಬಿಡುವ ಎರಡು ದಂಡಗಳನ್ನು / ಸಲಾಕೆಗಳನ್ನು ಬಂಧಿಸಲು.

ಎಲ್ಲೆಲ್ಲಿ ಬಳಕೆ

- ಅಗ್ರಗಾಮಿ ಯೋಜನೆಗಳ ತಯಾರಿಕೆಯಲ್ಲಿ
- ಕಟ್ಟಡ ನಿರ್ಮಾಣ ಸಮಯದಲ್ಲಿ
- ಶಿಬಿರೋಪಕರಣಗಳ ತಯಾರಿಕೆಯಲ್ಲಿ

ವಿಧಾನ

ಎರಡೂ ದಂಡಗಳನ್ನೂ ಸೇರಿಸಿ ದಿಮ್ಮಿಗಂಟನ್ನು ಹಾಕಿ ಬಿಗಿ ಮಾಡಬೇಕು. ಧಾವಕದ ತುದಿಯನ್ನು ಎರಡೂ ದಂಡಗಳನ್ನೂ ಸುತ್ತುವರೆಯುವಂತೆ (ಮೂಲೆಯಿಂದ ಮೂಲೆಗೆ) ಸುತ್ತುಗಳನ್ನು ಹಾಕಬೇಕು. ಇದು 3-4 ಬಾರಿ ಆದ ನಂತರ ಮತ್ತೊಂದು ಮೂಲೆಯಿಂದ ಮೂಲೆಗೆ ಸುತ್ತುಗಳನ್ನು ಹಾಕಬೇಕು. ಆನಂತರ ಈ ಸುತ್ತುಗಳಿಗೆ ಬಿಗಿ ಸುತ್ತುಗಳನ್ನು ಹಾಕಿ ಕೆಳಗಿನ ದಂಡಕ್ಕೆ ಕೊಟ್ಟಿಗೆ ಗಂಟನ್ನು ಹಾಕಿ ಮುಕ್ತಾಯಗೊಳಿಸಬೇಕು.



3. ಸಮಾನಾಂತರ ಕಟ್ಟು / ಉರುಟು ಕಟ್ಟು
(Parallel Lashing / Round Lashing)

ಮುಖ್ಯ ಉದ್ದೇಶ

ಎರಡು ದಂಡಗಳನ್ನು ಸೇರಿಸಿ ಹೆಚ್ಚು ಬಲಪಡಿಸಲು ಅಥವಾ ಉದ್ದ ಹೆಚ್ಚಿಸಲು.

ಎಲ್ಲೆಲ್ಲಿ ಬಳಕೆ

- ಧ್ವಜಸ್ತಂಭ ನಿರ್ಮಾಣದಲ್ಲಿ
- ಕಟ್ಟಡ ನಿರ್ಮಾಣ ಸಮಯದಲ್ಲಿ
- ಶಿಬಿರೋಪಕರಣಗಳ ತಯಾರಿಕೆಯಲ್ಲಿ
- ಅಗ್ರಗಾಮಿ ಯೋಜನೆಗಳ ತಯಾರಿಕೆಯಲ್ಲಿ

ವಿಧಾನ

ಒಂದು ದಂಡದ ಮೇಲ್ಭಾಗದ ತುದಿಯ ಪಕ್ಕದಲ್ಲಿ ಇನ್ನೊಂದು ದಂಡದ ಕೆಳಭಾಗದ ತುದಿ ಬರುವಂತೆ ಇಟ್ಟು ಎರಡನ್ನೂ ಸೇರಿಸಿ ಕೊಟ್ಟಿಗೆ ಗಂಟನ್ನು ಹಾಕಿ ಬಿಗಿ ಮಾಡಬೇಕು. ನಂತರ ಎರಡೂ ದಂಡಗಳನ್ನು ಸೇರಿಸಿ ಸಾಕಷ್ಟು ಸುತ್ತುಗಳನ್ನು ಬಿಗಿಯಾಗಿ ಹಾಕಬೇಕು. ಸುತ್ತುಗಳು ಒಂದರ ಪಕ್ಕ ಒಂದು ಇರುವಂತೆ ಹಾಕಬೇಕು. ಕೊಟ್ಟಿಗೆ ಗಂಟಿನಿಂದ ಮುಕ್ತಾಯಗೊಳಿಸಬೇಕು. ಪುನಃ ಈ ಕಟ್ಟಿನಿಂದ ಸ್ವಲ್ಪ ದೂರದಲ್ಲಿ ಎರಡು ದಂಡಗಳನ್ನು ಸೇರಿಸಿ ಮತ್ತೊಂದು ಸಮಾನಂತಾರ ಗಂಟನ್ನು ಆಕಬೇಕು.





4. ಕತ್ತರಿ ಕಟ್ಟು (Shear Lashing)

<u>ಮುಖ್ಯ ಉದ್ದೇಶ</u>

ಎರಡು ದಂಡಗಳನ್ನು ಒಂದು ತುದಿಯಲ್ಲಿ ಸೇರಿಸಿ ಬಂಧಿಸಲು. ನಂತರ ∧ ಆಕಾರದ ರಚನೆ ತಯಾರಿಸಲು

ಎಲ್ಲೆಲ್ಲಿ ಬಳಕೆ

- ಶಿಬಿರೋಪಕರಣಗಳ ತಯಾರಿಕೆಯಲ್ಲಿ
- ಸೇತುವೆ ಕಟ್ಟುವಾಗ ಎರಡು ತುದಿಗಳಲ್ಲಿ ಆಧಾರವಾಗಿ

ವಿಧಾನ

ಎರಡೂ ದಂಡಗಳನ್ನೂ ಒಂದರ ಪಕ್ಕ ಒಂದನ್ನಿಟ್ಟು ತುದಿಯಿಂದ ಸ್ವಲ್ಪ ಕೆಳಗೆ ಒಂದು ದಂಡಕ್ಕೆ ಕೊಟ್ಟಿಗೆ ಗಂಟನ್ನು ಹಾಕಬೇಕು. ನಂತರ ಎರಡೂ ದಂಡಗಳೂ ಸೇರಿದಂತೆ 4-5 ಸುತ್ತುಗಳನ್ನು ಮೇಲ್ಮುಖವಾಗಿ ಹಾಕಬೇಕು. ನಂತರ 3-4 ಬಿಗಿ ಸುತ್ತುಗಳಿಂದ ಈ ಸುತ್ತುಗಳನ್ನು ಬಿಗಿ ಮಾಡಬೇಕು. ಅಂತಿಮವಾಗಿ ಇನ್ನೊಂದು ದಂಡಕ್ಕೆ ಕೊಟ್ಟಿಗೆ ಗಂಟನ್ನು ಹಾಕಿ ಮುಕ್ತಾಯಗೊಳಿಸಬೇಕು. ಎರಡೂ ದಂಡಗಳನ್ನೂ ಕತ್ತರಿ ಆಕಾರದಲ್ಲಿ ಎಳೆಯಬೇಕು.

4. 8 ಆಕಾರದ ಕಟ್ಟು /ತ್ರಿಪಾದ ಕಟ್ಟು
(Figure of 8Lashing / Tripod Lashing)

ಮುಖ್ಯ ಉದ್ದೇಶ

ಮೂರು ದಂಡಗಳನ್ನು ಬಳಸಿ ತ್ರಿಪಾದ ತಯಾರಿಸಲು

ಎಲ್ಲೆಲ್ಲಿ ಬಳಕೆ

- ಶಿಬಿರೋಪಕರಣಗಳ ತಯಾರಿಕೆಯಲ್ಲಿ
- ಅಗ್ರಗಾಮಿ ಯೋಜನೆಗಳ ತಯಾರಿಕೆಯಲ್ಲಿ

ವಿಧಾನ

ಮೂರು ದಂಡಗಳನ್ನು (ಒಂದೇ ಅಳತೆ ಆದರೆ ಉತ್ತಮ) ಒಂದರ ಪಕ್ಕ ಒಂದನ್ನಿಡಬೇಕು. (ಇಲ್ಲಿ ಇನ್ನೊಂದು ಮಾರ್ಪಾಡು ಸಹ ಇದೆ, ಮಧ್ಯದಲ್ಲಿರುವ ದಂಡವನ್ನು ವಿರುದ್ಧ ದಿಕ್ಕಿನಲ್ಲಿ ಇಡುತ್ತಾರೆ). ಹೊರಗಡೆ ಇರುವ ದಂಡಕ್ಕೆ ತುದಿಯಿಂದ ಸ್ವಲ್ಪ ಕೆಳಕ್ಕೆ (5-6 ಸುತ್ತುಗಳು ಬರುವಷ್ಟು) ಕೊಟ್ಟಿಗೆ ಗಂಟನ್ನು ಹಾಕಬೇಕು. ನಂತರ ಪರ್ಯಾಯವಾಗಿ ಕೆಳಗೆ-ಮೇಲೆ ಬರುವಂತೆ ಹಗ್ಗವನ್ನು (8 ಸಂಖ್ಯೆ ಆಕಾರ) ದಂಡಗಳಿಗೆ ಸುತ್ತಬೇಕು. (ಮೇಲ್ಮುಖವಾಗಿ) ಅನಂತರ ಎರಡೂ ದಂಡಗಳ ನಡುವೆ ಸುತ್ತುಗಳನ್ನು ಬಿಗಿಸುತ್ತುಗಳಿಂದ ಬಿಗಿಗೊಳಿಸಬೇಕು. ಅಂತಿಮವಾಗಿ ಇನ್ನೊಂದು ಹೊರಭಾಗದ ದಂಡಕ್ಕೆ ಕೊಟ್ಟಿಗೆ ಗಂಟನ್ನು ಹಾಕಿ ಮುಕ್ತಾಯಗೊಳಿಸಬೇಕು.



ಅಧ್ಯಾಯ 6

ಹೆಣಿಗೆಗಳು (Splices)

ಹಗ್ಗದ ಎಳೆಗಳನ್ನು ಬಿಚ್ಚಿ ಅದರದೇ ಎಳೆಗಳ ನಡುವೆ ಹಾಯಿಸುವುದೇ ಹೆಣಿಗೆ. ಹಗ್ಗ ದಪ್ಪವಾದಾಗ ಅಥವಾ ಇನ್ನಾವುದೇ ಸಂದರ್ಭದಲ್ಲಿ ಗಂಟುಗಳನ್ನು ಹಾಕುವುದು ಅಸಾಧ್ಯವಾದಾಗ ಹಾಗೂ ಶಾಶ್ವತವಾದ ಮತ್ತು ಹೆಚ್ಚು ಬಿಗಿಯಾದ ರಚನೆ ಬೇಕಾದಾಗ ಹೆಣಿಗೆ ಹಾಕುತ್ತೇವೆ.

ಇದರಲ್ಲಿ ಅನೇಕ ವಿಧಗಳಿದ್ದರೂ, ಮೂರು ವಿಧದ ಹೆಣಿಗೆಗಳು ಪ್ರಮುಖವಾದವು.

1.ಹಿಮ್ಮುಖ ಹೆಣಿಗೆ (Back Splice)

2.ಕುಣಿಕೆ ಹೆಣಿಗೆ (Eye Splice)

3. ಕೂಡು ಹೆಣಿಗೆ (Short Splice)

<u>ಸೂಚನೆ</u> :- ಈ ಪುಸ್ತಕದಲ್ಲಿ ಮೂರು ಎಳೆಗಳ ಹಗ್ಗದ ಉದಾಹರಣೆ ತೆಗೆದುಕೊಳ್ಳಲಾಗಿದೆ. ಇದೇ ವಿಧಾನವನ್ನು ಹೆಚ್ಚಿನ ಎಳೆಗಳ ಹಗ್ಗಕ್ಕೂ ಬಳಸಬಹುದು.

ಹೆಣಿಗೆಗಳನ್ನು ಪ್ರಾರಂಭಿಸುವುದಕ್ಕೆ ಮುನ್ನ ಹಗ್ಗದ ತುದಿಯಲ್ಲಿ ಮುಕುಟ ಗಂಟು (Crown Knot) ಹಾಕುವುದು ಉತ್ತಮ. ಇದರಿಂದ ಹೆಣಿಗೆಗಳು ಬಿಚ್ಚಿಕೊಳ್ಳದಂತೆ ತಡೆಯಾಗುತ್ತದೆ. ಇದಕ್ಕೆ ಬದಲಾಗಿ ಅಂಟುಪಟ್ಟಿ ಹಾಕಬಹುದು. ಅಥವಾ ಹುರಿ ಸುತ್ತ ಬಹುದು.

<u>ಮುಕುಟ ಗಂಟನ್ನು ಹಾಕುವ ವಿಧಾನ</u> :-

ಹಗ್ಗದ ತುದಿಯ ಎಳೆಗಳನ್ನು ಸುಮಾರು 10 ಸೆ.ಮೀ ನಷ್ಟು ದೂರ ಬಿಚ್ಚಿಕೊಳ್ಳಬೇಕು. ಎಳೆಗಳು ಯಾವ ದಿಕ್ಕಿನಲ್ಲಿ ಹೆಣೆಯಲ್ಪಟ್ಟಿದೆಯೋ ಅದೇ ರೀತಿ ಇರುವಂತೆ ಎಡಗೈಯಲ್ಲಿ ಎಳೆಗಳ ಬುಡವನ್ನು ಹಿಡಿದುಕೊಳ್ಳಬೇಕು. ಒಂದು ಎಳೆಯಲ್ಲಿ ಕುಣಿ ಮಾಡಿಕೊಂಡು ಅದರ ತುದಿಯನ್ನು ಪಕ್ಕದ ಎಳೆಯ ಮೇಲೆ ಹಾಕಬೇಕು. ಎರಡನೆಯ ಎಳೆಯನ್ನು ಅದರ ಪಕ್ಕದ ಎಳೆಯ ಮೇಲೆ ಹಾಕಬೇಕು. ಕೊನೆಯ ಎಳೆಯನ್ನು ಒಂದನೆ ಎಳೆಯ ಕುಣಿಯೊಳಗೆ ಹಾಯಿಸಿ ನಿಧಾನವಾಗಿ ಒಂದೊಂದೇ ಎಳೆಯನ್ನು ಬಿಗಿಮಾಡುತ್ತಾ ಹೋಗಬೇಕು. ಹಗ್ಗದ ಮೇಲ್ಭಾಗದಲ್ಲಿ ಗಂಟು ಉಂಟಾಗುತ್ತದೆ.

1. ಹಿಮ್ಮುಖ ಹೆಣಿಗೆ (Back Splicing)

ಮುಖ್ಯ ಉದ್ದೇಶ

ಹಗ್ಗದ ಎಳೆಗಳು ಬಿಚ್ಚಿಕೊಳ್ಳದಂತೆ ತಡೆಯಲು (ಹುರಿ ಸುತ್ತುವುದಕ್ಕೆ ಪರ್ಯಾಯವಾಗಿ)

ಎಲ್ಲೆಲ್ಲಿ ಬಳಕೆ

- ಅಗ್ರಗಾಮಿ ಯೋಜನೆಗಳ ತಯಾರಿಕೆಯಲ್ಲಿ

ವಿಧಾನ

ಎಳೆಗಳನ್ನು ಬಿಚ್ಚಿಕೊಂಡು ಮುಕುಟ ಗಂಟನ್ನು ಹಾಕಬೇಕು. ಹಗ್ಗದ ಸ್ಥಿರ ಭಾಗವನ್ನು ಎಡಗೈಯಲ್ಲಿ ಹಿಡಿದುಕೊಳ್ಳಬೇಕು. ಮುಕುಟ ಗಂಟಿನ ಒಂದು ಎಳೆಯನ್ನು ತೆಗೆದುಕೊಂಡು ಅದರ ಮುಂದುವರೆದ ಭಾಗವನ್ನು ಗುರುತಿಸಿ ಅದರ ಮೇಲೆ ಹಾಯಿಸಿ ಮುಂದಿನ ಎಳೆಯ ಕೆಳಗೆ ಹಾಯಿಸಬೇಕು. ಎರಡನೇ ಎಳೆಯನ್ನು ಇದರ ಮೇಲೆ ಹಾಯಿಸಿ ಮುಂದಿನ ಎಳೆಯ ಕೆಳಗೆ ಹಾಯಿಸಬೇಕು. ಹಾಗೆಯೇ ಮೂರನೆಯ ಎಳೆಯನ್ನು ಹಾಯಿಸಿದರೆ ಒಂದು ಸುತ್ತು ಪೂರೈಸುತ್ತದೆ. ಇದೇ ರೀತಿ ಎಳೆಗಳು ಮುಗಿಯುವವರೆಗೆ ಮುಂದುವರೆಸಬೇಕು.



2. ಕುಣಿಕೆ ಹೆಣಿಗೆ (Eye Splicing)

<u>ಮುಖ್ಯ ಉದ್ದೇಶ</u>

ಹಗ್ಗದ ತುದಿಯಲ್ಲಿ ಭದ್ರವಾದ, ಜಾರದೇ ಇರುವ ಶಾಶ್ವತವಾದ ಕುಣಿಕೆ ಮಾಡಲು

ಎಲ್ಲೆಲ್ಲಿ ಬಳಕೆ

- ಅಗ್ರಗಾಮಿ ಯೋಜನೆಗಳಲ್ಲಿ
- ಹಡಗು ಲಂಗರು ಹಾಕಲು

ವಿಧಾನ

ಮಕುಟ ಗಂಟನ್ನು ಹಾಕಿಕೊಳ್ಳಬೇಕು. ಕುಣಿಕೆಯ ಗಾತ್ರವನ್ನು ನಿರ್ಧರಿಸಿ ಹಗ್ಗದಲ್ಲಿ ಗುರುತಿಸಿಕೊಳ್ಳಬೇಕು. ಆ ಗುರುತಿನಿಂದ ಕೆಳಕ್ಕೆ ಹಿಂದೆ ಹೇಳಿದ ರೀತಿಯಲ್ಲಿಯೇ ಪರ್ಯಾಯವಾಗಿ ಮೇಲೆ-ಕೆಳಗೆ ಎಳೆಗಳನ್ನು ಹಾಯಿಸಿ ಮುಕ್ತಾಯಗೊಳಿಸಬೇಕು.



3. ಕೂಡು ಹೆಣಿಗೆ (Short Splicing)

ಮುಖ್ಯ ಉದ್ದೇಶ

ಎರಡು ಹಗ್ಗಗಳನ್ನು ಸೇರಿಸಲು

ಎಲ್ಲೆಲ್ಲಿ ಬಳಕೆ

✦ ಅಗ್ರಗಾಮಿ ಯೋಜನೆಗಳಲ್ಲಿ

ವಿಧಾನ

ಎರಡೂ ಹಗ್ಗಗಳ ತುದಿಗಳಲ್ಲಿ ಮುಕುಟ ಗಂಟುಗಳನ್ನು ಹಾಕಿಕೊಳ್ಳಬೇಕು. ಈ ಗಂಟುಗಳು ಪರಸ್ಪರ ಅಭಿಮುಖವಾಗಿರುವಂತೆ ಹಗ್ಗಗಳನ್ನು ಸೇರಿಸಬೇಕು. ಒಂದು ಹಗ್ಗದ ಎಳೆಗಳನ್ನು ಮತ್ತೊಂದು ಹಗ್ಗದ ಎಳೆಗಳಲ್ಲಿ ಹಿಂದೆ ಹೇಳಿದಂತೆ, ಪರ್ಯಾಯವಾಗಿ ಮೇಲೆ-ಕೆಳಗೆ ಹಾಯಿಸಿ ಮುಕ್ತಾಯಗೊಳಿಸಬೇಕು.



ಗಮನಿಸಿ :

1. ಹಗ್ಗದ ಎಳೆಗಳನ್ನು ಬಿಚ್ಚಿದ ನಂತರ ಅವುಗಳ ತುದಿಯನ್ನು ಹುರಿ ಸುತ್ತಬೇಕು ಅಥವಾ ಅಂಟು ಪಟ್ಟಿಯಿಂದ ಮುಚ್ಚಬೇಕು. ತಪ್ಪಿದರೆ, ಅದರ ದಾರಗಳು ಬಿಚ್ಚಿಕೊಳ್ಳುತ್ತವೆ.
2. ಹೆಣಿಗೆ ಹಾಕಿದ ಭಾಗದಲ್ಲಿ ಹಗ್ಗವು ಇತರ ಭಾಗಕ್ಕಿಂತ ದಪ್ಪವಾಗಿರುತ್ತದೆ.
3. ಹೆಣಿಗೆಗಳು ಭದ್ರವಾಗಿರಬೇಕಾದರೆ ಹಾಗೂ ಪ್ರಯೋಜನಕಾರಿಯಾಗಿರಬೇಕಾದರೆ ಕನಿಷ್ಠ ಐದು ಹೆಣಿಗೆಗಳು ಇರಬೇಕು.
4. ಬಿಚ್ಚಿಕೊಳ್ಳಬೇಕಾದ ಎಳೆಗಳ ಕನಿಷ್ಠ ಉದ್ದವನ್ನು ಈ ಕೆಳಗಿನ ಸೂತ್ರದಿಂದ ತಿಳಿಯಬಹುದು.

$$L = 3 X dn$$

L = ಎಳೆಗಳ ಉದ್ದ

d= ಹಗ್ಗದ ವ್ಯಾಸ

n= ಹೆಣಿಗೆಗಳ ಸಂಖ್ಯೆ

ಉದಾಹರಣೆ : -ಹಗ್ಗದ ವ್ಯಾಸ = 0.5. ಸೆ.ಮೀ. ಏಣಿಗೆಗಳ ಸಂಖ್ಯೆ 5

ಆದುದರಿಂದ ಎಳೆಗಳ ಉದ್ದ = 3 X 0.5 X 5 = 7.5. ಸೆಂ.ಮೀ.

5. ಹಗ್ಗ ದಪ್ಪ ಇದ್ದಾಗ ಹೆಣಿಗೆ ಹಾಕುವ ಸಂದರ್ಭದಲ್ಲಿ ಎಳೆಗಳನ್ನು ಬಿಡಿಸಿಕೊಳ್ಳಲು ಕಷ್ಟವಾಗಬಹುದು. ಅಂತಹ ಸಂದರ್ಭದಲ್ಲಿ ಚೂಪು ತುದಿಯುಳ್ಳ ವಸ್ತುವನ್ನು ಬಳಸಿ ಬಿಡಿಸಿಕೊಳ್ಳಬೇಕು. (ಬಾಲ್ ಪೆನ್, ದಬ್ಬಳ, ಕಬ್ಬಿಣದ ಸಲಾಕೆ, ಇತ್ಯಾದಿ)

ನೀವೂ ಪ್ರಯತ್ನಿಸಿ !!!





ಅನುಬಂಧ – 1

ಚೌಕಕಟ್ಟು II (Square Lashing -II)

ಮುಖ್ಯ ಉದ್ದೇಶ

ಎರಡು ಕಂಬಗಳನ್ನು / ದಂಡಗಳನ್ನು / ಸಲಾಕೆಗಳನ್ನು (ಲಂಬ ಮತ್ತು ಅಡ್ಡ) ಸೇರಿಸಿ ಬಂದಿಸಲು.

ಎಲ್ಲೆಲ್ಲಿ ಬಳಕೆ

- ಅಗ್ರಗಾಮಿ ಯೋಜನೆಗಳ ತಯಾರಿಕೆಯಲ್ಲಿ
- ಕಟ್ಟಡ ನಿರ್ಮಾಣ ಸಮಯದಲ್ಲಿ
- ಶಿಬಿರೋಪಕರಣಗಳ ತಯಾರಿಕೆಯಲ್ಲಿ

ವಿಧಾನ

ಹಗ್ಗದಲ್ಲಿ ಒಂದು ಕುಣಿಯನ್ನು (Bight) ಮಾಡಿಕೊಂಡು ಅದನ್ನು ಕೆಳಗಿನ ದಂಡಕ್ಕೆ ಹಾಕಿಕೊಳ್ಳಬೇಕು. ನಂತರ ಹಗ್ಗದ ಎರಡೂ ತುದಿಗಳನ್ನು ಮೇಲಿನ ದಂಡದ ಮೇಲಿನಿಂದ ಎರಡೂ ಕಡೆ ಹಾಯಿಸಿ ಕೆಳಗಿನ ದಂಡದ ಕೆಳಭಾಗದಲ್ಲಿ ಒಂದು ಅರ್ಧ ಮಲುಕು ಹಾಕಬೇಕು. ಮುಂದುವರೆದು, ಅದೇ ರೀತಿ ಕೆಳಭಾಗದ ದಂಡದ ಮತ್ತೊಂದು ಬದಿಯಲ್ಲಿ ಅರ್ಧ ಮಲುಕು ಹಾಕಬೇಕು. ಹೀಗೆ ಮೂರು-ನಾಲ್ಕು ಬಾರಿ ಮಾಡಿ ಕೆಳದಂಡದ ಮೇಲೆ ಅರ್ಧ ಮಲುಕು ಹಾಕಬೇಕು. ನಂತರ ಮೊದಲಿನ ಸುತ್ತುಗಳನ್ನು ಸುತ್ತುವರೆಯುವಂತೆ ಎರಡು-ಮೂರು ಬಾರಿ ಬಿಗಿ ಸುತ್ತುಗಳನ್ನು ಹಾಕಿ ಸಮ ಗಂಟಿನಿಂದ ಮುಕ್ತಾಯಗೊಳಿಸಬೇಕು.



ಅನುಬಂಧ - 2

ಜಪಾನ್ ಚೌಕಕಟ್ಟು

(Japanese Square Lashing)

<u>ಮುಖ್ಯ ಉದ್ದೇಶ</u>

ಎರಡು ಕಂಬಗಳನ್ನು / ದಂಡಗಳನ್ನು / ಸಲಾಕೆಗಳನ್ನು (ಲಂಬ ಮತ್ತು ಅಡ್ಡ) ಸೇರಿಸಿ ಬಂಧಿಸಲು.

ಎಲ್ಲೆಲ್ಲಿ ಬಳಕೆ

- ಅಗ್ರಗಾಮಿ ಯೋಜನೆಗಳ ತಯಾರಿಕೆಯಲ್ಲಿ
- ಕಟ್ಟಡ ನಿರ್ಮಾಣ ಸಮಯದಲ್ಲಿ
- ಶಿಬಿರೋಪಕರಣಗಳ ತಯಾರಿಕೆಯಲ್ಲಿ

ವಿಧಾನ

ಹಿಂದಿನಂತೆಯೇ ಹಗ್ಗದಲ್ಲಿ ಒಂದು ಕುಣಿಯನ್ನು ಮಾಡಿಕೊಳ್ಳಬೇಕು. ಆನಂತರ ಹಗ್ಗದ ಎರಡು ತುದಿಗಳನ್ನು ಒಟ್ಟಿಗೆ ಸೇರಿಸಿ ಹಿಡಿದು ಎರಡೂ ದಂಡಗಳನ್ನು ಮೂರು-ನಾಲ್ಕು ಬಾರಿ ಸುತ್ತುವರಿಯಬೇಕು. ಕೊನೆಯಲ್ಲಿ ಕೆಳಗಿನ ದಂಡವನ್ನು ಸುತ್ತುವರೆದ ನಂತರ ಎರಡೂ ಕೊನೆಗಳನ್ನು ಬೇರೆ-ಬೇರೆಯಾಗಿ ಹಿಡಿದು ಒಂದು ತುದಿಯನ್ನು ಮೇಲಿನ ದಂಡದ ಮೇಲಿನಿಂದ ತಂದು ಮತ್ತೊಂದು ತುದಿಯನ್ನು ಕೆಳಗಿನಿಂದ ತಂದು ಒಂದು ಅರ್ಧ ಮಲುಕು ಹಾಕಬೇಕು. ನಂತರ ಬಿಗಿಸುತ್ತುಗಳನ್ನು ಹಾಕಿ ಸಮಗಂಟಿನಲ್ಲಿ ಮುಕ್ತಾಯಗೊಳಿಸಬೇಕು.



ಅನುಬಂಧ - 3

ಪೀಪಾಯಿ ಮಲಕು (Barrel Hitch)

ಮುಖ್ಯ ಉದ್ದೇಶ

ಅಗಲವಾದ ಪೀಪಾಯಿ ಅಥವಾ ಪೀಪಾಯಿಯಂತಹ ಪಾತ್ರೆಯನ್ನು ಸುಲಭವಾಗಿ ಮೇಲಕ್ಕೆ ಸಾಗಿಸಲು.

ಎಲ್ಲೆಲ್ಲಿ ಬಳಕೆ

- ಹಡಗುಗಳಲ್ಲಿ ಸಾಮಗ್ರಿಗಳನ್ನು ಮೇಲಕ್ಕೆ ಸಾಗಿಸಲು
- ಸ್ಕೌಟ್ ಶಿಬಿರಗಳಲ್ಲಿ ಸಾಮಗ್ರಿಗಳನ್ನು ಅಟ್ಟಣಿಗೆಯ ಮೇಲಕ್ಕೆ ಸಾಗಿಸಲು

ವಿಧಾನ

ಪೀಪಾಯಿ ಅಥವಾ ಪಾತ್ರೆಯನ್ನು ಹಗ್ಗದ ಮೇಲೆ ಇಡಿ. ಪೀಪಾಯಿಯ ಮೇಲೆ ಒಂದು ಮೇಲುಗೈ ಗಂಟನ್ನು ಹಾಕಿ. ಪೀಪಾಯಿಯ ಮೇಲ್ಭಾಗವನ್ನು ಆವರಿಸುವಂತೆ ಗಂಟನ್ನು ಹರಡಿ. ಹಗ್ಗದ ಎರಡು ತುದಿಗಳನ್ನು ಕುಣಿಕೆ ಗಂಟಿನ ಮೂಲಕ ಬಂಧಿಸಿ ಪೀಪಾಯಿಯನ್ನು ಮೇಲಕ್ಕೆ ಎತ್ತಿ.

ಪೀಪಾಯಿ ಮಲಕು (Barrel Hitch)

ಅನುಬಂಧ - 4

ಹಲಗೆ ಮಲಕು (Scaffold Hitch)

ಮುಖ್ಯ ಉದ್ದೇಶ

ಒಂದು ಹಲಗೆಯ ಎರಡೂ ತುದಿಗಳಿಗೆ ಹಗ್ಗ ಬಂಧಿಸಿ, ತೂಗು ಮಣೆ ತಯಾರಿಸಲು

ಎಲ್ಲೆಲ್ಲಿ ಬಳಕೆ

- ತೂಗುಮಣೆಯಲ್ಲಿ ಕುಳಿತು, ಹಳ್ಳ ಅಥವಾ ನದಿ ದಾಟಲು

ವಿಧಾನ

- ಹಲಗೆಯ ಕೊನೆಯಲ್ಲಿ ಹಗ್ಗವನ್ನು 3 ಸುತ್ತು ಹಾಕಬೇಕು. ಒಳಗಿನ ಭಾಗದಿಂದ ಪ್ರಾರಂಭಿಸಿ, ಸುತ್ತುಗಳಿಗೆ 1,2 ಮತ್ತು 3 ಸಂಖ್ಯೆ ನೀಡಬೇಕು
- 1ನೇ ಸುತ್ತನ್ನು 2ನೇ ಸುತ್ತಿನ ಮೇಲೆ ಹಾಯಿಸಿ ಮಧ್ಯದಲ್ಲಿ ಇಡಬೇಕು.
- 2ನೇ ಸುತ್ತನ್ನು ಹಲಗೆಯ ಕೊನೆಯಲ್ಲಿ ಕೆಳಗೆ ಹಾಯಿಸಬೇಕು.
- ಹಗ್ಗದ ಎರಡೂ ಕೊನೆಗಳನ್ನು ಮೇಲಕ್ಕೆ ಎಳೆದು, ಕುಣಿಕೆ ಗಂಟನ್ನು ಹಾಕಬೇಕು.
- ಇದೇ ರೀತಿ ಹಲಗೆಯ ಮತ್ತೊಂದು ತುದಿಗೆ ಕಟ್ಟಬೇಕು.

ಅನುಬಂಧ – 5

ನಾವಿಕರ ಗಂಟಿನ ನಂಟು

ಕಡಿವಾಣ ಹಾಕಲು ಸದಾ ಬಯಸುವುದು ನಾವಿಕನ ಗಂಟು :
ಜೋಡಣೆಯೊಳುಬಿಗಿ, ಬಿಚ್ಚಲೂ ಸುಲಭ, ಅದಕೇ ಆ ನಂಟು ।
ಎಳೆತ ಜೋರು, ಒತ್ತಡವಜೀರು, ಗಡುಸಾಗಿರುವುದನು ಕಾಣಲುಂಟು :
ಚಕ್ಕನೆ ಕಟ್ಟಲು ಬರುವುದು, ಸುಲಭದಿ ಬಿಚ್ಚಲೂ ಬರುವುದುಂಟು ।
ದಿಮ್ಮಿಗಂಟು, ಸಮಗಂಟು, ಕಣಕಾಲುಗಂಟು ಮತ್ತು ಬೆಸ್ತರ ಗಂಟು :
ಕೊಟ್ಟಿಗೆ ಗಂಟು, ಸರಳ, ಸುಲಭ ಮಲುಕು ಗಂಟುಗಳನೇಕ ಉಂಟು ।
ಪ್ರತಿಗಂಟಿನುದ್ದೇಶ ಸರಳ, ಸಮಗ್ರ ವಿಶೇಷವೆಂಬುದನು ತಿಳಿ :
(ಸಾಮಾನ್ಯ ವಿಷಯವಸ್ತು, ಜೀವಿಗಳಿಗೂ ಮಿಗಿಲೆಂಬುದನರಿ) ।
ನಾವಿಕರವರವರ ನೆನಪಿನಂಗಳದಿ ಹುದುಗಿಟ್ಟಿಹರು :
ಮಲುಕು ಗಂಟುಗಳ ಮೊದಲಿಗರಹ ಪೂರ್ವಜರ ನೆನವರು ।
ಆ ನೆನಪಿನೊಳುಕ್ಕಿ ಬರುವುದು ಗಂಟುಗಳ ಮಹಾಪೂರ :
"ಕುಣಿಕೆಗಂಟು" ಗಂಟುಗಳ ರಾಜ, ಬಲಾಢ್ಯ ಪೋರ ।
ಪ್ರತಿಗಂಟಿಗೂ, ಅದರದರದೇ ರೀತಿ, ನೀತಿಗಳುಂಟು :
ಅದುಬಿಟ್ಟು, ಬೇರೆ ದಾರಿಯಿಲ್ಲವೆಂಬುದನರಿಯಲುಂಟು ॥

ಸರ್ - ಅಲನ್ ಹರ್ಬರ್ಟ್ ಅವರ "ವಾಟ್ ನಾಟ್"
ಎಂಬ ಆಂಗ್ಲ ಗೀತೆಯ ಸರಳಾನುವಾದ
ರಾ. ಚಂದ್ರಶೇಖರನ್

ಅನುಭಂದ - 6

ಉಪಯುಕ್ತ ಸಲಹೆಗಳು

1. ಗಂಟುಗಳನ್ನು ಪ್ರದರ್ಶನವನ್ನು ವಿಕ್ಷೀಸಿ ಪ್ರಾಯೋಗಿಕವಾಗಿ ಗಂಟು ಹಾಕಿ ಕಲಿಯುವುದು ಉತ್ತಮ ರೀತಿ.

2. ಕಲಿಯುವವರು, ಪ್ರದರ್ಶನಕಾರರ ಹಿಂದೆ, ಪಕ್ಕಗಳಲ್ಲಿ ನಿಂತು (ಹಿಂಭುಜದ ಮೇಲಿನಿಂದ) ವೀಕ್ಷಿಸುವುದರ ಮೂಲಕ ವೀಕ್ಷಣೆಯು ಪ್ರಭಾವಶಾಲಿಯೂ, ಪರಿಣಾಮಕಾರಿಯೂ ಆಗುತ್ತದೆಂಬರಿಯ ಪುಸ್ತಕದ ಕಲಿಕೆ ಉಪಯೋಗವಿಲ್ಲ.

3. ಗಂಟುಗಳನ್ನು ಹಾಕಲೂ ಬಿಚ್ಚಲೂ ಸುಲಭವಿರಬೇಕು.

4. ಎಳೆತದಲ್ಲಿದ್ದಾಗ ಗಂಟು ಗೋಜಾಗ ಬಾರದು, ಜಾರಬಾರದು.

5. ಉಪಯೋಗಕ್ಕೆ ತಕ್ಕಂತೆ ಸೂಕ್ತ ರೀತಿಯ (ಉದ್ದ,ದಪ್ಪ,ಗಾತ್ರ ಇತ್ಯಾದಿ) ಹಗ್ಗವನ್ನಾರಿಸಿ

6. ಗಂಟುಗಳನ್ನು ಸರಿಯಾದ ರೀತಿಯಲ್ಲಿ ಹಾಕುವುದೂ. ಉಪಯೋಗಿಸುವುದೂ ಮುಖ್ಯವೇ ಹೊರತು ಅದರ ಹೆಸರು ಮಾತ್ರವಲ್ಲ.

7. ಹಗ್ಗವು ಸುಸ್ಥಿತಿಯಲ್ಲಿಡುವುದು ಬಹಳ ಮುಖ್ಯ

8. ಹಗ್ಗವನ್ನು ಸೂಕ್ತ ರೀತಿಯಲ್ಲಿ ಸಂಗ್ರಹಿಸಿಡಬೇಕು.

9. ಒದ್ದೆಯಾದ ಹಗ್ಗವನ್ನು ಒಣಗಿಸಿ ಸುತ್ತಿ ಇಡಬೇಕು.

10. ಹಗ್ಗವನ್ನು ಅತಿಯಾದ ಶಾಖದಲ್ಲಿಯಾಗಲಿ ಅಥವಾ ಅತಿ ಕಡಿಮೆ ಉಷ್ಣತೆಯಲ್ಲಾಗಲಿ ಇಟ್ಟಿರಬಾರದು

11. ಹಗ್ಗವನ್ನು ನೆಲದ ಮೇಲೆ ಮಣ್ಣಿನಲ್ಲಿ ಇಡಬಾರದು.

12. ಸೂಕ್ತರೀತಿಯಲ್ಲಿ ಸುರುಳಿ ಸುತ್ತಿ ಗೂಟಕ್ಕೆ ನೇತುಹಾಕಬೇಕು ಅಥವಾ ಮರದ ಹಲಗೆಯ ಮೇಲೆ ಇಡಬೇಕು.



The Underwater Sea-Saw.













ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

THE BHARAT SCOUTS & GUIDES, KARNATAKA

ನಂ. 39, ರಾಜ್ಯ ಕಾರ್ಯಾಲಯ, ಅರಮನೆ ರಸ್ತೆ,
(ಮಹಾರಾಣಿ ಕಾಲೇಜ್ ಪಕ್ಕದಲ್ಲಿ) ಬೆಂಗಳೂರು – 560 001
ದೂರವಾಣಿ : 080 – 22260017 / 22267470
Email : info@bsgkarnataka.org